# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಜುಲೈ 23, 2022

ಸಂಪುಟ : 49 ಸಂಚಿಕೆ : 70 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಜ್ವರಪೀಡಿತ ಗ್ರಾಮಕ್ಕೆ ಶಾಸಕರ ಭೇಟಿ: ಅಧಿಕಾರಿಗಳಿಗೆ ತರಾಟೆ

ಜಗಳೂರು

ಜಗಳೂರು, ಜು.22- ತಾಲ್ಲೂಕಿನ ವ್ಯಾಸಗೊಂಡನಹಳ್ಳಿ ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಜನರಿಗೆ ಜ್ವರ ಬಂದು ಕೈಕಾಲು ನೋವು, ಸೊಂಟ ನೋವು ಕಾಣಿಸಿಕೊಂಡು ಜನರು ಹಾಸಿಗೆ ಹಿಡಿದಿದ್ದರು. ಗ್ರಾಮಕ್ಕೆ ಭೇಟಿ ನೀಡಿದ ಶಾಸಕ ಎಸ್.ವಿ. ರಾಮಚಂದ್ರ ಜನರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಆರೋಗ್ಯ ಇಲಾಖೆ ವೈದ್ಯಾಧಿಕಾರಿಗಳ ಸಿಬ್ಬಂದಿ ಗ್ರಾಮದ ಸಮುದಾಯ ಭವನದಲ್ಲಿ ಜನರ ಆರೋಗ್ಯ ಸುಧಾರಿಸಲು ಸ್ಥಳದಲ್ಲಿಯೇ ಟೆಂಟ್ ಹಾಕಿ ತಪಾಸಣೆ ನಡೆಸಿ, ಚಿಕಿತ್ಸೆ ಸೌಲಭ್ಯ ನೀಡುತ್ತಿದ್ದಾರೆ.

ಗ್ರಾಪಂ ಪಿ.ಡಿ.ಒ ಕೊಟ್ರೇಶ್‌ರವರಿಗೆ ತರಾಟೆ ತೆಗೆದುಕೊಂಡ ಶಾಸಕರು ಗ್ರಾಮಗಳಿಗೆ ಭೇಟಿ ನೀಡಿ, ಚರಂಡಿ ಸ್ವಚ್ಛತೆ ಸೇರಿದಂತೆ ವಿವಿಧ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ತಿಳಿಸಿದರು. ಊರಿನ ಜನರಲ್ಲಿ ಪದೇ ಪದೇ ಜ್ವರ, ಕೈಕಾಲು ನೋವು ಮತ್ತು ನೆಗಡಿ, ಕೆಮ್ಮು ಕಾಣಿಸಿಕೊಂಡ ಹಿನ್ನೆಲೆಯನ್ನು ಪತ್ತೆ ಹಚ್ಚಲು ಆರೋಗ್ಯ ಇಲಾಖೆ ಅಧಿಕಾರಿಗಳು ರೋಗಿಗಳ ರಕ್ತ ಪರೀಕ್ಷೆಗೊಳಪಡಿಸಿ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯಾಧಿಕಾರಿ ಸಿಬ್ಬಂದಿಗೆ ಶಾಸಕರು ಸೂಚಿಸಿದರು.

ಈ ಹಿಂದೆ ಗ್ರಾಮಕ್ಕೆ ಆರೋಗ್ಯ ಇಲಾಖೆ ಅಧಿಕಾರಿಗಳು ಸಹ ಭೇಟಿ ನೀಡಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲಾಗಿತ್ತು. ಕಳೆದ ಕೆಲವು ದಿನಗಳಿಂದ ಅತಿ ಹೆಚ್ಚು ಮಳೆ ಬಂದು ಕುಡಿಯುವ ನೀರಿನ ಬೋರ್‌ವೆಲ್‌ನಲ್ಲಿ ಕಲುಷಿತ, ಗಬ್ಬು ನೀರು ಮಿಶ್ರಣವಾಗಿತ್ತು. ಆದರೆ, ಇದೀಗ ಗ್ರಾ.ಪಂ ಇಲಾಖೆಯವರು ಹೊಸ ಮೋಟಾರ್, ಪೈಪುಗಳನ್ನು ಅಳವಡಿಸಿ ಕುಡಿಯುವ ನೀರು ಒದಗಿಸಿ ಚರಂಡಿ ಸ್ವಚ್ಛಗೊಳಿಸಿ ಗ್ರಾಮದಲ್ಲಿ ಬ್ಲೀಚಿಂಗ್ ಪೌಡರ್ ಸಿಂಪಡಿಸಲಾಗಿದೆ.

ಗ್ರಾಮದಲ್ಲಿ ಅಧಿಕಾರಿಗಳ ತಂಡ ಬೀಡು ಬಿಟ್ಟು ಜ್ವರ, ಕೈಕಾಲು ನೋವು, ನೆಗಡಿ, ಕೆಮ್ಮಿನಿಂದ ಬಳಲುತ್ತಿರುವ ಸುಮಾರು 50 ಕ್ಕೂ ಹೆಚ್ಚು ಜನರು ತಪಾಸಣೆಯಲ್ಲಿ ಪಾಲ್ಗೊಂಡು ಚಿಕಿತ್ಸೆ ಪಡೆದರು. ಗ್ರಾಮದಲ್ಲಿ ಯಾವುದೇ ಗಂಭೀರವಾದ ಸಮಸ್ಯೆ ಮತ್ತು ಸಾವು ಕಂಡುಬಂದಿಲ್ಲ ಎಂದು ಟಿ ಎಚ್ ಓ ನಾಗರಾಜ್ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಜಿ. ಸಂತೋಷ್‌ಕುಮಾರ್, ಬಿಸ್ತುವಳ್ಳಿ ವಿಎಸ್‌ಎಸ್‌ಎನ್ ಅಧ್ಯಕ್ಷ ಬಾಬು ಆರೋಗ್ಯ ಸಲಹಾ ಸಮಿತಿ ಸದಸ್ಯ ಪೂಜಾರ್ ಸಿದ್ದಪ್ಪ, ಗ್ರಾಪಂ ಸದಸ್ಯ ಕೃಷ್ಣಪ್ಪ, ಪರಶುರಾಮ, ಗ್ರಾಮದ ಮುಖಂಡ ಕಂಪಳೇಶ್, ತಾಲ್ಲೂಕು ವೈದ್ಯಾಧಿಕಾರಿ, ಸಿಬ್ಬಂದಿ ಸೇರಿದಂತೆ ನಿರೀಕ್ಷಣಾಧಿಕಾರಿ ಅಮೃತೇಶ್ವರ ಸ್ವಾಮಿ, ಶ್ರೀಧರ್, ಸಮುದಾಯ ಆರೋಗ್ಯ ಅಧಿಕಾರಿ ಮಾರ್ಸಿ, ಕಾವ್ಯ, ಪ್ರಯೋಗ ಶಾಲಾ ತಂತ್ರಜ್ಞ ಅಧಿಕಾರಿ ತಿಪ್ಪೇಸ್ವಾಮಿ ಭಾಗವಹಿಸಿದ್ದರು.

# ಜನತಾ ಬಜಾರ್ ನಿರ್ದೇಶಕರಾಗಿ ಶಿವಕುಮಾರ



ದಾವಣಗೆರೆ, ಜು. 22 - ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಮಳಿಗೆಯ ಆಡಳಿತ ಮಂಡಳಿ ನಿರ್ದೇಶಕರಾಗಿ ಮಲೇಬೆನ್ನೂರಿನ ಪಿ.ಹೆಚ್. ಶಿವಕುಮಾರ್ ಆಯ್ಕೆಯಾಗಿದ್ದಾರೆ.

ಹೆಚ್. ವಿಷ್ಣುಪಂಥ್ ಅವರ ನಿಧನದಿಂದಾಗಿ ತೆರವಾಗಿದ್ದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಪಿ.ಹೆಚ್. ಶಿವಕುಮಾರ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾಗಿದ್ದ ಸಹಕಾರ ಸಂಘಗಳ ಸಹಾಯಕ ನಿಬಂಧಕ ಸತೀಶ್ ಘೋಷಣೆ ಮಾಡಿದರು.

ಜನತಾ ಬಜಾರ್ ಕಛೇರಿಯಲ್ಲಿ ನಿನ್ನೆ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ಎ ಆರ್ ಕಛೇರಿಯ ಜಗದೀಶ್ ಅವರು ಶಿವಕುಮಾರ ಅವರಿಗೆ ಪ್ರಮಾಣ ಪತ್ರ ನೀಡಿದರು.

ಜನತಾ ಬಜಾರ್ ಅಧ್ಯಕ್ಷ ಬಿ.ವಿ. ಚಂದ್ರಶೇಖರ್ ನಿರ್ದೇಶಕ ಕೆ. ಚಂದ್ರಣ್ಣ, ಎ.ಅಜ್ಜಲ್‌ಖಾನ್, ಎ. ಮಾರುತಿ, ವಿ. ಮಂಜುನಾಥ್, ಅಮ್ರಿನ್ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಹರಿಹರ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ ಪಟೇಲ್. ಮಲೇಬೆನ್ನೂರು ಪಿಎಸಿಎಸ್ ಮಾಜಿ ಅಧ್ಯಕ್ಷ ಕೆ.ಪಿ. ಗಂಗಾಧರ್, ಪಿ.ಆರ್. ಕುಮಾರ್ . ಕೊಕ್ಕನೂರಿನ ಡಿ. ಸೋಮಶೇಖರ್, ಕುಂಬಳೂರು ವಾಸು, ಮಲೇಬೆನ್ನೂರಿನ ಬಾಂಬೆ ಮುಸ್ತಾಫ್, ಪತ್ರಕರ್ತ ಜಿಗಳಿ ಪ್ರಕಾಶ್ ಈ ವೇಳೆ ಹಾಜರಿದ್ದು. ಶಿವಕುಮಾರ ಅವರನ್ನು ಅಭಿನಂದಿಸಿದರು.

ಶಿವಕುಮಾರ್, ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ. ಎಸ್.ಹನುಮಂತಪ್ಪ ಅವರ ಪುತ್ರ.

## ಎಸ್ಸೆಸ್ಸೆಲ್ಸಿ ಸಿಬಿಎಸ್‌ಇ : ಸಿದ್ಧಗಂಗಾ ಶಾಲೆಗೆ ಶೇ. 98.43 ಫಲಿತಾಂಶ

ದಾವಣಗೆರೆ, ಜು.22- ಕೇಂದ್ರ ಪಠ್ಯಕ್ರಮದ 10ನೇ ತರಗತಿ ಫಲಿತಾಂಶ ಪ್ರಕಟವಾಗಿದ್ದು, ಸಿದ್ಧಗಂಗಾ ಶಾಲೆಯ ಹರ್ಷಿತಾ ಸಿಪಿ 500 ಕ್ಕೆ 486 ಅಂಕಗಳನ್ನು ಪಡೆದು ಶೇ. 97 ಅಂಕ ಗಳಿಸಿದ್ದಾಳೆ.

ಇಂಗ್ಲಿಷ್ 92, ಕನ್ನಡ 99, ಗಣಿತ 99, ವಿಜ್ಞಾನ 100, ಸಮಾಜ 96 ಅಂಕ ಗಳಿಸಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

**ಹರ್ಷಿತಾಗೆ ಶೇ. 97**

ನಿತ್ಯಶ್ರೀ ಕೊಂತಿಕಲ್ ಶೇ.96, ಮಮತ ಜಿ.ಬಿ. ಶೇ. 96, ಸಹನ ಎಲ್. ಶೇ. 95. ಮನೋಜ್ ಕೆ.ಟಿ. ಶೇ. 95, ಮಾನ್ಯ ಪಿ ಶೇ. 94, ಜಹ್ರಾ ಫಾತೀಮಾ ಶೇ. 93, ನೇಹಾ ಎಸ್. ನಾಯ್ಕ್ ಶೇ. 93, ವರ್ಷಾ ಶೇ.93, ಮುಜಕಿರ್ ಶೇ. 91, ಅಫ್ರಾ ಜೈನಾಬ್ ಶೇ. 90, ಮಧು ಆರ್ ಶೇ. 90 ಅಂಕಗಳನ್ನು ಪಡೆದಿದ್ದಾರೆ.

ಸಹನಾ ಎಲ್. ಗಣಿತದಲ್ಲಿ ಮತ್ತು ಹರ್ಷಿತ ಸಿ.ಪಿ. ವಿಜ್ಞಾನದಲ್ಲಿ 100 ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ.

12 ಮಕ್ಕಳು ಶೇ. 90ಕ್ಕೂ ಹೆಚ್ಚು, 20 ಮಕ್ಕಳು ಶೇ. 80 ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. ಅತ್ಯುನ್ನತ ಶ್ರೇಣಿಯಲ್ಲಿ 20 ಮಕ್ಕಳು, ಪ್ರಥಮ ದರ್ಜೆಯಲ್ಲಿ 38 ಮಕ್ಕಳು, ದ್ವಿತೀಯ ದರ್ಜೆಯಲ್ಲಿ 5 ಮಕ್ಕಳು ಸ್ಥಾನ ಪಡೆದಿದ್ದಾರೆ.

ಅತ್ಯುತ್ತಮ ಫಲಿತಾಂಶ ನೀಡಿರುವ 10ನೇ ತರಗತಿಯ ಮಕ್ಕಳಿಗೆ ಮತ್ತು ಬೋಧಕ ವರ್ಗದವರಿಗೆ ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್, ಉಪ ಪ್ರಾಚಾರ್ಯರಾದ ಮಂಜುಳಾ ಹಂಪಾಳಿ, ಕಾರ್ಯದರ್ಶಿ ಹೇಮಂತ್ ಡಿ. ಎಸ್, ನಿರ್ದೇಶಕ ಡಾ. ಜಯಂತ್, ಮುಖ್ಯಸ್ಥೆ ಜಸ್ಟಿನ್ ಡಿಸೌಜ ಅಭಿನಂದಿಸಿದ್ದಾರೆ.

## ನಗರದಲ್ಲಿ ಇಂದು ಯಕ್ಷಗಾನ ಪ್ರದರ್ಶನ

ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ಅಂಗ ಸಂಸ್ಥೆಯಾದ ಯಕ್ಷರಂಗ ಯಕ್ಷಗಾನ ಸಂಸ್ಥೆ ವತಿಯಿಂದ ನಗರದ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಸಭಾಂಗಣದಲ್ಲಿ ಇಂದು ಸಂಜೆ ಯಕ್ಷಗಾನ ಪ್ರದರ್ಶನ ನಡೆಯಲಿದೆ.

ಯಕ್ಷಗಾನ ಭಾಗವತ ಜೆ. ರಾಘವೇಂದ್ರ ಮಯ್ಯ ಪ್ರದರ್ಶನ ಉದ್ಘಾಟಿಸುವರು.

ಯಕ್ಷರಂಗದ ಅಧ್ಯಕ್ಷ ಮಲ್ಯಾಡಿ ಪ್ರಭಾಕರ ಶೆಟ್ಟಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಅತಿಥಿಗಳಾಗಿ ನಾಟಕ ಅಕಾಡೆಮಿ ಸದಸ್ಯ ರವೀಂದ್ರ ಹೆಚ್. ಅರಳಗುಪ್ಪಿ, ಬಣ್ಣದ ಸುಕ್ಕಟ್ಟು ಲಕ್ಷ್ಮೀನಾರಾಯಣಯ್ಯ, ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ರಾಜಶೇಖರ ಸಕ್ಕಟ್ಟು, ಯಕ್ಷರಂಗದ ಸಂತೋಷ್ ಕುಮಾರ್ ಬೇಳೂರು, ಕೆ.ಹೆಚ್. ಮಂಜುನಾಥ, ಹೇಮಾ ಶಾಂತಪ್ಪ ಪೂಜಾರಿ ಭಾಗವಹಿಸಲಿದ್ದಾರೆ.

'ಚಕ್ರ ಚಂಡಿಕೆ; ಮಹಾಭಾರತದ ಪೌರಾಣಿಕ ಕಥಾನಕದ ಅಪರೂಪದ ಯಕ್ಷಗಾನ ಪ್ರದರ್ಶನಗೊಳ್ಳಲಿದೆ.

## ಮಾಜಿ ಸಿಎಂ ಸಿದ್ಧರಾಮಯ್ಯನವರ ಅಮೃತ ಮಹೋತ್ಸವ ಕಾರ್ಯಾಲಯ ಉದ್ಘಾಟನೆ



ದಾವಣಗೆರೆ, ಜು. 22- ಮಾಜಿ ಸಿಎಂ ಸಿದ್ಧರಾಮಯ್ಯ ಅವರ 75 ನೇ ಜನ್ಮ ದಿನದ ಅಮೃತ ಮಹೋತ್ಸವ ಸಮಿತಿಯ ಕಾರ್ಯಾಲಯವನ್ನು ನಗರದ ಶಾಮನೂರು ರಸ್ತೆಯಲ್ಲಿನ ಬಾಪೂಜಿ ಅತಿಥಿ ಗೃಹದ ಆವರಣದಲ್ಲಿರುವ ಕೊಠಡಿಯಲ್ಲಿ ಮಾಜಿ ಸಿಎಂ ಸಿದ್ಧರಾಮಯ್ಯ ಸಮ್ಮುಖದಲ್ಲಿ ಸಮಿತಿ ಗೌರವಾಧ್ಯಕ್ಷರಾದ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಬಸವರಾಜ ರಾಯರೆಡ್ಡಿ, ಹೆಚ್. ಆಂಜನೇಯ, ಶಾಸಕ ಜಮೀರ್ ಅಹಮದ್, ಕೆಪಿಸಿಸಿ ಉಪಾಧ್ಯಕ್ಷ ಎಂ.ಸಿ. ವೇಣುಗೋಪಾಲ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್. ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮುಖಂಡರಾದ ಕೆ.ಎಸ್. ಬಸವಂತಪ್ಪ. ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಅಯೂಬ್ ಪೈಲ್ವಾನ್, ಮುದೇಗೌಡ್ರು ಗಿರೀಶ್, ಕವಿತಾ ರೆಡ್ಡಿ, ಪಿ. ರಾಜಕುಮಾರ್, ಸಾವನ್ ಮತ್ತಿತರರಿದ್ದರು.

# ಹರಪನಹಳ್ಳಿ : ರೋಗ ರುಜಿನಗಳು, ಇತರೆ ಕಾಯಿಲೆಗಳಿಗೆ ಅಜ್ಜಮ್ಮನ ಕಳಿಸುವ ಪದ್ಧತಿ

ಹರಪನಹಳ್ಳಿ, ಜು.22- ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಕಾಲ ಕಾಲಕ್ಕೆ ತಕ್ಕಂತೆ ಮಳೆ ಬೆಳೆಯಾಗಿ, ರೋಗ, ರುಜಿನಗಳು ಸೇರಿದಂತೆ ನಾನಾ ಕಾಯಿಲೆಗಳು ಬಾರದಂತೆ ಅಜ್ಜಮ್ಮನ ಕಳಿಸೋ ಪದ್ಧತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.



ಪಟ್ಟಣದ ಬಾಪೂಜಿ ನಗರದ 5ನೇ ವಾರ್ಡಿನ ನಿವಾಸಿಗಳು, ಕಾಲೋನಿಯ ಭಕ್ತರು ಶ್ರೀ ಉಚ್ಚಂಗೆಮ್ಮ ದುರುಗಮ್ಮ ದೇವಸ್ಥಾನದಿಂದ ಶುಕ್ರವಾರ, ಅಜ್ಜಿ ಅಮ್ಮನ ಪೂರ್ವಜರ ನಿಯಮಗಳಂತೆ ಹೊಸ ನೀರು ತುಂಬಿದ ಕುಡಿಕೆ, ಎಲೆ, ಹೂವುಗಳನ್ನು ಇಟ್ಟು, ಹೂವು-ಹಣ್ಣುಗಳೊಂದಿಗೆ ಆ ತಾಯಿಯನ್ನು ಸಂಪ್ರದಾಯದಂತೆ ಎಲ್ಲರಿಗೂ ಮಳೆ, ಬೆಳೆ ಚೆನ್ನಾಗಿ ಕೊಡು ತಾಯಿ ಮತ್ತು ಯಾವುದೇ ರೀತಿಯ ರೋಗ, ರುಜಿನಗಳು ಬಾರದಂತೆ ಕಾಪಾಡಿಕೊಂಡು ನಮ್ಮನ್ನು ರಕ್ಷಿಸು ತಾಯಿ ಎಂದು ಪ್ರಾರ್ಥಿಸಿ, ಬೈಪಾಸ್ ರಸ್ತೆಯ ಮೂಲಕ ಮದ್ದಮ್ಮನ ದೇವಸ್ಥಾನದ ಪಕ್ಕದಲ್ಲಿರುವ ನಾಗಪ್ಪನ ಕಟ್ಟೆಯ ಮೇಲೆ ಎಲ್ಲರಿಗೂ ಒಳಿತು ಮಾಡು ಎಂದು ಬೇಡಿಕೊಂಡು ಅಮ್ಮನನ್ನು ಕಳಿಸುವ ಸಂಪ್ರದಾಯವನ್ನು ಭಕ್ತಿಯಿಂದ ನೆರವೇರಿಸಿದರು.

ಈ ಸಂದರ್ಭದಲ್ಲಿ ಕಾಲೋನಿಯ ಪೂಜಾರಿ ಮಹಾಲಿಂಗಪ್ಪ, ಮುಖಂಡರಾದ ಎ.ರಾಮಪ್ಪ, ಮಾಳಗಿ ಮರಿಯಪ್ಪ, ಎ.ನಿಂಗಪ್ಪ, ಒ.ಮಹಾಂತೇಶ್, ಬಿ. ಮಹೇಂದ್ರಕುಮಾರ್, ಎಸ್. ಸುರೇಶ್, ಎಸ್. ಕೊಟ್ರೇಶ್, ಹೆಚ್. ಪರಸಪ್ಪ, ಕೆ.ದುರ್ಗಾಪ್ರಸಾದ್, ಹೆಚ್.ರವಿ, ಪೂಜಾರ್ ಗಂಗಮ್ಮ, ಅಂಜಿನಮ್ಮ, ಎಸ್. ನಿಂಗಪ್ಪ, ಮಂಜುನಾಥ್, ರೇಖಮ್ಮ, ಕಾಳಮ್ಮ, ರೇಣುಕಮ್ಮ, ಸುಲೋಚನಮ್ಮ, ಹಾಲಮ್ಮ, ಸೇರಿದಂತೆ ಅಪಾರ ಭಕ್ತಾದಿಗಳು ಪಾಲ್ಗೊಂಡಿದ್ದರು.

## ಹರಿಹರದ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದಲ್ಲಿ ಇಂದು ಪೂಜೆ

ಭರಂಪುರ ಬಡಾವಣೆಯ ಶ್ರೀ ನೂರಾ ಎಂಟು ಲಿಂಗೇಶ್ವರ ದೇವಸ್ಥಾನದ ಆವರಣದ ಹಿಂಬದಿಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯ ಸ್ವಾಮಿ ಆಡಿ ಕೃತ್ತಿಕ ಪೂಜೆ ನಿಮ್ಮಿತ್ತವಾಗಿ ಇಂದು ಬೆಳಗ್ಗೆ 7 ಗಂಟೆಗೆ ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

12 ಗಂಟೆಗೆ ದೀಪಾರಾಧನೆ, ಮಹಾಮಂಗಳಾರತಿ ಪ್ರಸಾದ ವಿನಿಯೋಗ ನೆರವೇರಲಿದೆ. ಸಂಜೆ 7-30 ಕ್ಕೆ ದೀಪ ನಮಸ್ಕಾರ ಸೇರಿದಂತೆ ಇತರೆ ಪೂಜಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

## ಇಂದು 'ಮಲ್ಲಿಕಾ' ಕ್ರೀಡಾ, ಸಾಂಸ್ಕೃತಿಕ ಉತ್ಸವದ ಸಮಾರೋಪ

ದಾವಣಗೆರೆ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ 'ಮಲ್ಲಿಕಾ' ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವದ ಸಮಾರೋಪ ಸಮಾರಂಭ ಇಂದು ಸಂಜೆ 5 ಗಂಟೆಗೆ ನಡೆಯಲಿದೆ.

ಮುಖ್ಯ ಅತಿಥಿಗಳಾಗಿ ಸಂಸದ ಡಾ. ಜಿ.ಎಂ. ಸಿದ್ದೇಶ್ವರ, ಹೆಸರಾಂತ ಸ್ಯಾಕ್ಸೋಫೋನ್ ವಾದಕ ವಿದ್ವಾನ್ ಶ್ರೀಧರ್ ಸಾಗರ್, ಝೀ ವಾಹಿನಿಯ ಸರಿಗಮಪ ರಿಯಾಲಿಟಿ ಶೋ ಸ್ಪರ್ಧಿಗಳಾಗಿದ್ದ ವರ್ಣ ಚೌಹ್ವಾಣ್, ನೇಹಾ ಶಾಸ್ತ್ರಿ, ಅಶ್ವಿನ್ ಶರ್ಮಾ ಭಾಗವಹಿಸಲಿದ್ದು, ಕಾಲೇಜಿನ ಚೇರ್ಮನ್ ಜಿ.ಎಂ. ಲಿಂಗರಾಜ್ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ಸಂದರ್ಭದಲ್ಲಿ ಸಾಧಕ 12 ವಿದ್ಯಾರ್ಥಿಗಳಿಗೆ ಬಂಗಾರದ ಪದಕ, ಪ್ರತಿಭಾನ್ವಿತ 26 ವಿದ್ಯಾರ್ಥಿಗಳಿಗೆ ಬೆಳ್ಳಿ ಪದಕ ವಿತರಿಸಲಾಗುವುದು. ಪಿಹೆಚ್‌ಡಿ ಪದವಿ ಪಡೆದ ಕಾಲೇಜಿನ ಪ್ರಾಧ್ಯಾಪಕರನ್ನು ಗೌರವಿಸಲಾಗುವುದು.

## ಸಿಬಿಎಸ್‌ಇ : ಖನ್ನೂರ ಶಾಲೆಗೆ 100

ರಾಣೇಬೆನ್ನೂರು, ಜು. 22- ಸಿಬಿಎಸ್‌ಇ ಪರೀಕ್ಷೆಯಲ್ಲಿ ಖನ್ನೂರ ವಿದ್ಯಾನಿಕೇತನ ಶಾಲೆಗೆ ಶೇ. 100 ರಷ್ಟು ಫಲಿತಾಂಶ ಲಭಿಸಿದೆ. ಮಹಮದ್ ಕೈಫ್ ಹಾನಗಲ್ ಶೇ. 92.4 ಅಂಕಗಳೊಂದಿಗೆ ಪ್ರಥಮ ಸ್ಥಾನ, ಸಂಜನಾ ಅಥಡ್ಕರ್ ಶೇ. 87.8 ರಷ್ಟು ದ್ವಿತೀಯ ಸ್ಥಾನ, ನೇಹಾ ಶಿಗ್ಗಾಂವಿ ವಿದ್ಯಾರ್ಥಿನಿಯು ಶೇ. 87.4 ತೃತೀಯ ಸ್ಥಾನ ಪಡೆದಿದ್ದಾರೆ.

## ನಗರದಲ್ಲಿ ವಿದ್ಯುತ್ ಇಲ್ಲ

ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಇತರೆ ಪ್ರದೇಶ ಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಪೊಲೀಸ್ ಕಾರ್ಯಾಚರಣೆ : 24 ಗಂಟೆಗಳಲ್ಲೇ ಅಪಹರಣಕಾರರ ಬಂಧನ



ಕೊಟ್ಟೂರು

ಕೊಟ್ಟೂರು, ಜು.22- ಪಟ್ಟಣದ ರಿಯಲ್ ಎಸ್ಟೇಟ್ ಉದ್ಯಮಿ ಹಾಲೇಶ್ ಅವರನ್ನು ನಿವೇಶನ ಕೊಡಿಸುವಂತೆ ಕರೆದೊಯ್ದು, ಅವರನ್ನು ಅಪಹರಣ ಮಾಡಿ ಅವರಿಗೆ 80 ಲಕ್ಷ ಬೇಡಿಕೆ ಇಟ್ಟಿದ್ದರು. ಹಾಲೇಶ್ ಪ್ರಾಣ ಬೆದರಿಕೆಗೆ ಹೆದರಿ 20 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಒಪ್ಪಿಕೊಂಡು ಸಿಪಿಎಡ್ ಕಾಲೇಜ್ ಬಳಿ 20 ಲಕ್ಷ ರೂಪಾಯಿ ನೀಡಿದ ನಂತರ ಅಪಹರಣಕಾರರು ಹಾಲೇಶ್‌ನನ್ನು ಬಿಟ್ಟು ಹೋಗಿದ್ದರು. ಈ ಕುರಿತು ಹಾಲೇಶ್ ದೂರನ್ನು ಆಧರಿಸಿ, ಕೊಟ್ಟೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿತ್ತು. ಪ್ರಕರಣ ದಾಖಲಾದ ತಕ್ಷಣವೇ 24 ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಮಾಡುವುದರಲ್ಲಿ ಪೊಲೀಸರು ಕಾರ್ಯಾಚರಣೆ ಯಶಸ್ವಿಗೊಳಿಸಿದ್ದಾರೆ.

ಅಪಹರಣಕಾರರನ್ನು ಹಿಡಿಯಲು ಮೂರು ತಂಡಗಳನ್ನು ರಚನೆ ಮಾಡಲಾಗಿತ್ತು. ಈ ಮೂರೂ ತಂಡಗಳಿಂದ ದಾವಣಗೆರೆಯಲ್ಲಿ ಅಪಹರಣಕಾರರನ್ನು ಬಂಧಿಸಿ ದ್ದಾರೆ. ಅಪಹರಣಕಾರರಾದ ದಾವಣಗೆರೆ ಜಿಲ್ಲೆಯ ಮಂಜು (26), ಶಾಂತಕುಮಾರ್ (24), ರಾಕೇಶ್ (19), ರಾಹುಲ್ (21), ಜಗಳೂರಿನ ಚಿರಾಗ್ (19), ಅಲ್ತಾಫ್ (23), ಹಾವೇರಿ ಜಿಲ್ಲೆಯ ಶಿವಕುಮಾರ್ (21), ಒಟ್ಟು ಏಳು ಆರೋಪಿಗಳನ್ನು ದಾವಣಗೆರೆ ನಗರದಲ್ಲಿ ಪತ್ತೆ ಮಾಡಿ ರಾತ್ರಿ 9 ಗಂಟೆಗೆ ಪ್ರಾಥಮಿಕ ತನಿಖೆಯಲ್ಲಿ ಬಂಧಿಸಿ, ಅವರಿಂದ 16.52 ಲಕ್ಷ ರೂಗಳನ್ನು ವಶಪಡಿಸಿಕೊಂಡು, ಕೃತ್ಯವೆಸಗಲು ಉಪಯೋಗಿಸಿದ ಐದು ಮೊಬೈಲ್ ಫೋನ್‌ಗಳು, ಎರಡು ಮಚ್ಚುಗಳು, ಎರಡು ಚಾಕುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ವಿಜಯನಗರ ಜಿಲ್ಲೆಯ ಎಸ್ಪಿ ಡಾ. ಅರುಣ್ ಸುದ್ದಿಗಾರರಿಗೆ ತಿಳಿಸಿದರು.

## ಜೈನ್ ಸಿಬಿಎಸ್‌ಇ ಶಾಲೆಗೆ ಶೇ. 100 ಫಲಿತಾಂಶ

ದಾವಣಗೆರೆ, ಜು.22- ಶಾಮನೂರಿನಲ್ಲಿರುವ ಜೈನ್ ವಿದ್ಯಾಲಯ ಸಿಬಿಎಸ್‌ಇ ಶಾಲೆಗೆ 10ನೇ ತರಗತಿ ಫಲಿತಾಂಶದಲ್ಲಿ ಶೇ. 100 ಫಲಿತಾಂಶ ಬಂದಿರುತ್ತದೆ. 10 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 18 ವಿದ್ಯಾರ್ಥಿಗಳು ಪ್ರಥಮ ದರ್ಜೆ ಮತ್ತು 07 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಮೊಹಮ್ಮದ್ ಉಮೇರ್ 487 (ಶೇ.97.4), ಉಲ್ಲಾಸ್ ಸಿ. 485 (ಶೇ.97) ಮತ್ತು ನಮನ್ ನಹರ್ 476 (ಶೇ.95) ಅಂಕಗಳನ್ನು ಗಳಿಸಿದ್ದಾರೆ.

## ನಗರದಲ್ಲಿ ಇಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಜಾತ್ರೆ

ಲೋಕಿಕೆರೆ ರಸ್ತೆಯ ಎಸ್.ಎ. ರವೀಂದ್ರನಾಥ್ ಬಡಾವಣೆ ಬಳಿಯ ಸುಬ್ರಹ್ಮಣ್ಯ ನಗರದಲ್ಲಿರುವ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸ್ವಾಮಿಯ ಆಷಾಢ ಜಾತ್ರಾ ಮಹೋತ್ಸವ ಇಂದು ನಡೆಯಲಿದೆ.


### ಶ್ರೀಮತಿ ಬೆಳ್ಳೂಡಿ ರೇವಮ್ಮ ನಿಧನ



ಹರಿಹರ ತಾಲ್ಲೂಕು ಬೆಳ್ಳೂಡಿ ಗ್ರಾಮದ ವಾಸಿ ದಿ. ಬಿ.ಎಂ. ರೇವಣಸಿದ್ದಯ್ಯನವರ ಧರ್ಮಪತ್ನಿ

**ಶ್ರೀಮತಿ ರೇವಮ್ಮ**

ಇವರು ದಿನಾಂಕ 22.7.2022ರ ಶುಕ್ರವಾರ ಸಂಜೆ 5.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 96 ವರ್ಷ ವಯಸ್ಸಾಗಿತ್ತು. ನಾಲ್ವರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.7.2022ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಹರಿಹರ ತಾಲ್ಲೂಕು ಬೆಳ್ಳೂಡಿ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ -90086 39166, 80889 11666**

### ಶ್ರೀಮತಿ ಕೆ.ಹೆಚ್ ಗೀತಾ ನಿಧನ



ದಾವಣಗೆರೆ ರಂಗನಾಥ ಬಡಾವಣೆ ವಾಸಿ **ಕೆ.ಎಂ ಹನುಮಂತರಾಜ್** ಇವರ ಧರ್ಮಪತ್ನಿ

**ಶ್ರೀಮತಿ ಕೆ.ಹೆಚ್ ಗೀತಾ**

ಇವರು ದಿನಾಂಕ 22.7.2022ರ ಶುಕ್ರವಾರ ಬೆಳಗಿನ ಜಾವ 5 ಗಂಟೆಗೆ ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 58 ವರ್ಷ ವಯಸ್ಸಾಗಿತ್ತು. ಐವರು ಸಹೋದರರು, ಇಬ್ಬರು ಸಹೋದರಿಯರು, ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅಂದೇ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

**ಇಂತಿ ದುಃಖತಪ್ತ ಕುಟುಂಬ ವರ್ಗ**

**ಶ್ರೀಮತಿ ಕರಿಯಪ್ಪರ ಮಂಜುಳಮ್ಮ, ದಿ. ಶ್ರೀ ಮಹಾದೇವಪ್ಪ ಮತ್ತು ಸಹೋದರರು, ಕರಿಯಪ್ಪರ ವಂಶಸ್ಥರು,** ಶಿರಮಗೊಂಡನಹಳ್ಳಿ.
**ಶ್ರೀಮತಿ ಬಿ.ಆರ್. ಗಿರಿಜಾ, ದಿ. ಶ್ರೀ.ಬಿ ರಾಮಚಂದ್ರ ಮತ್ತು ಸಹೋದರರು ಹಾಗೂ ಬಿಂದಪ್ಪ ವಂಶಸ್ಥರು, ಶಾಮನೂರು ಹಾಗೂ ಬಂಧು-ಮಿತ್ರರು.**

### ಸವಿ ನೆನಪು



**ದಿ|| ಶಿವಪ್ರಕಾಶ್ ಡಿ.ಎನ್. (ಶಿವು)**

ನಿಧನ : 23.07.2012

**ನೀವು ನಮ್ಮನ್ನಗಲಿ ಇಂದಿಗೆ ಹತ್ತು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ...**

ತಂದೆ : ✦ ಎಂ.ಎಸ್. ನಾಗರಾಜ್. ತಾಯಿ : ✦ ಶ್ರೀಮತಿ ಕೆ.ಜಿ. ಸೌಭಾಗ್ಯ
✦ ಎಂ.ಎನ್. ಮಯೂರ್ ಶ್ರೀಮತಿ ರತ್ನಮ್ಮ
✦ ಎಂ.ಎನ್. ವಿಜಯ್ ✦ ಎಂ.ಎನ್. ಶ್ರೀನಿಧಿ ✦ ಎಂ.ಎನ್. ರೇವಂತ್
ಮೊಮ್ಮಗ : ✦ ಸಿದ್ಧಾರ್ಥ್ ಹಾಗೂ ದೊಡ್ಡಬಸಪ್ಪ ವಂಶಸ್ಥರು ಬಂಧು-ಬಳಗ, ಮೆಳ್ಳೇಕಟ್ಟೆ
ಚಿಕ್ಕಮ್ಮ : ಶ್ರೀಮತಿ ಅನಸೂಯ ದೇವೇಂದ್ರಪ್ಪ, ಲೋಲಾಕ್ಷಮ್ಮ

ಶ್ರೀ ರೇವಣಸಿದ್ದೇಶ್ವರ ವಿದ್ಯಾಸಂಸ್ಥೆಯ ಆಡಳಿತ ಮಂಡಳಿ.
ಶ್ರೀ ರೇವಣಸಿದ್ದೇಶ್ವರ ವಸತಿಯುತ ಪ್ರೌಢಶಾಲೆ ಮತ್ತು
ಶ್ರೀಮತಿ ನಾಗಮ್ಮ ಹಿರಿಯ ಪ್ರಾಥಮಿಕ ಶಾಲೆಯ ಸಿಬ್ಬಂದಿ ವರ್ಗ, ಬಸಾಪುರ.

|| ಶ್ರೀ ಗುರು ಕೊಟ್ಟೂರೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 12ನೇ ಮೇನ್, 3ನೇ ಕ್ರಾಸ್ ವಾಸಿ **ಶ್ರೀ ಸೋಮನಹಳ್ಳಿ ಮುತ್ತಣ್ಣ** ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 18.7.2022ನೇ ಮಂಗಳವಾರ ಬೆಳಗಿನ ಜಾವ 12.5ಕ್ಕೆ ನನ್ನ ಧರ್ಮಪತ್ನಿ

**ಶ್ರೀಮತಿ ಸೋಮನಹಳ್ಳಿ ಪೂರ್ಣಿಮಾ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 23.7.2022ನೇ ಶನಿವಾರ ಬೆಳಿಗ್ಗೆ 11 ಕ್ಕೆ ದಾವಣಗೆರೆ ಸಿಟಿ ಸಿದ್ದವೀರಪ್ಪ ಬಡಾವಣೆ, 12ನೇ ಮೇನ್, 3ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಶ್ರೀ ಸೋಮನಹಳ್ಳಿ ಮುತ್ತಣ್ಣ ಮತ್ತು ಮಕ್ಕಳು ಸೋಮನಹಳ್ಳಿ ವಂಶಸ್ಥರು, ಬಂಧು-ಮಿತ್ರರು, ದಾವಣಗೆರೆ.**

**ಮೊ. 96630-30147**

ವಿ.ಸೂ : ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

|| ಶ್ರೀ ಉಜ್ಜಿನಿ ಸಿದ್ದೇಶ್ವರ ಪ್ರಸನ್ನ ||

### ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಚಿತ್ರದುರ್ಗ ಜಿ. ಸಿಂಗಾಪುರ ಗ್ರಾಮದ (ದಾವಣಗೆರೆ, ವಿದ್ಯಾನಗರ 19ನೇ ಕ್ರಾಸ್ ವಾಸಿಗಳಾದ) **ಮಾಕುಂಟೇರ ಶರಣೆ ಗೌರಮ್ಮ** ಇವರ ಮಾಡುವ ವಿಜ್ಞಾಪನೆಗಳು. ದಿನಾಂಕ 14.7.2022ನೇ ಗುರುವಾರ ಮಧ್ಯಾಹ್ನ 1.10ಕ್ಕೆ ನನ್ನ ಪೂಜ್ಯ ಪತಿಯವರಾದ

**ಶರಣ ಶ್ರೀ ಎಂ.ಶರಣಪ್ಪ**

(ನಿ. ಕೆ.ಇ.ಬಿ. ನೌಕರರು)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಶಿವಗಣಾರಾಧನೆಯನ್ನು**

ದಿನಾಂಕ 24.7.2022ರ ಭಾನುವಾರ ಬೆಳಿಗ್ಗೆ 10ಕ್ಕೆ ನಗರದ ವಿದ್ಯಾನಗರ, 19ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಧರ್ಮಪತ್ನಿ ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಸೊಸೆ ಮತ್ತು ಮೊಮ್ಮಕ್ಕಳು ಹಾಗೂ ಮಾಕುಂಟೆ ವಂಶಸ್ಥರು, ಸಿಂಗಾಪುರ.**

**ಮೊ: 99808 04716, 98454 55400**

ವಿ.ಸೂ.: ಈಗಾಗಲೇ ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.

### ಶ್ರೀಮತಿ ಕಾಶೀಪುರ ವಿಜಯಮ್ಮ ನಿಧನ



ಜನನ : 1.6.1958 ಮರಣ : 22.7.2022

ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ವಾಸಿ ದಿ. ಸಾಲಕಟ್ಟೆ ಮುರುಗೇಶಪ್ಪ ಅವರ ಧರ್ಮಪತ್ನಿ

**ಶ್ರೀಮತಿ ವಿಜಯಮ್ಮ**

ಇವರು ದಿನಾಂಕ 22.7.2022ರ ಶುಕ್ರವಾರ ರಾತ್ರಿ 10.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 23.7.2022ರ ಶನಿವಾರ ಮಧ್ಯಾಹ್ನ 1 ಗಂಟೆಗೆ ದಾವಣಗೆರೆ ತಾಲ್ಲೂಕು ಕಾಶೀಪುರ ಗ್ರಾಮದ ಮೃತರ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ -**

**94810 38460 / 97439 69206 / 99164 87963**

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಜುಲೈ 23, 2022


# ಬಿಜೆಪಿಯ ಹೆದರಿಸುವ ತಂತ್ರ ಫಲಿಸದು

## ಸೋನಿಯಾ-ರಾಹುಲ್ ಗಾಂಧಿ ಜೊತೆ ನಾವಿದ್ದೇವೆ: ಸಿದ್ದರಾಮಯ್ಯ



### ನ್ಯಾಯಾಂಗ ತನಿಖೆಗೆ ಆಗ್ರಹ

**ಗುತ್ತಿಗೆದಾರ ಸಂತೋಷ್ ಪಾಟೀಲ್ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆ.ಎಸ್. ಈಶ್ವರಪ್ಪ ಅವರ ರಕ್ಷಣೆಗೆ ಪೊಲೀಸರು ಬಿ ರಿಪೋರ್ಟ್ ಹಾಕಿದ್ದಾರೆ. ಇದನ್ನು ತಿರಸ್ಕರಿಸಿ ಹಾಲಿ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.**

### ಪಕೋಡಾ ಮಾರಲೂ ಆಗ್ತಿಲ್ಲ

**ಉದ್ಯೋಗ ಸೃಷ್ಟಿಸಲು ಸಾಧ್ಯವಾಗದ ಪ್ರಧಾನಿ, ಕೆಲಸ ಕೇಳಿದರೆ ಪಕೋಡಾ ಮಾರಿ ಎಂದು ಹೇಳುತ್ತಾರೆ.**
**ಆದರೆ ಇಂದು ಅಡುಗೆ ಎಣ್ಣೆ ದುಬಾರಿಯಾಗಿದ್ದು, ಪಕೋಡ ಮಾರಲೂ ಸಾಧ್ಯವಾಗುತ್ತಿಲ್ಲ ಎಂದು ಸಿದ್ಧರಾಮಯ್ಯ ವ್ಯಂಗ್ಯವಾಡಿದರು.**

ದಾವಣಗೆರೆ, ಜು. 22- ನ್ಯಾಷನಲ್ ಹೆರಾಲ್ಡ್ ಹಗರಣಕ್ಕೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ಇತ್ಯರ್ಥವಾಗಿದ್ದರೂ ಸಹ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತೆ ಸುಳ್ಳು ಮೊಕದ್ದಮೆಗೆ ಜೀವ ಕೊಟ್ಟಿದೆ. ಇಡಿ ದುರ್ಬಳಕೆ ಮಾಡಿಕೊಂಡು ಸೋನಿಯಾ ಗಾಂಧಿಯವರನ್ನು ವಿಚಾರಣೆ ನಡೆಸಲಾಗುತ್ತಿದೆ. ಇದು ಕಾಂಗ್ರೆಸ್ ಮುಖಂಡರ ಮನೋಸ್ಥೈರ್ಯ ಕುಗ್ಗಿಸುವ ತಂತ್ರ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ಇ.ಡಿ ವಿಚಾರಣೆ ನಡೆಸುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ನಿಂದ ನಗರದ ಜಯದೇವ ವೃತ್ತದಲ್ಲಿ ಇಂದು ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರನ್ನು ಹೆದರಿಸಿದರೆ ಎಲ್ಲರೂ ಬಿಜೆಪಿಗೆ ಬರುತ್ತಾರೆ ಎಂದು ಭಾವಿಸಿ ಇ.ಡಿ., ಐ.ಟಿ ಇಲಾಖೆಯನ್ನು ದುರುಪಯೋಗ ಮಾಡಿಕೊಂಡು ಕಾಂಗ್ರೆಸ್ ಪಕ್ಷದ ನಾಯಕರು, ಕಾರ್ಯಕರ್ತರನ್ನು ಹೆದರಿಸುವ ಕೆಲಸ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಯಾವುದೇ ಎಫ್‌ಐಆರ್, ಸಮನ್ಸ್ ಇಲ್ಲದೇ ಈ ಮೊಕದ್ದಮೆಯಲ್ಲಿ ವಾರೆಂಟ್ ಕೊಡಲು ಬರುವುದಿಲ್ಲ. ಆದಾಗ್ಯೂ ಸೋನಿಯಾ ಅವರ ವಿಚಾರಣೆ ನಡೆಸಲಾಗುತ್ತಿದೆ ಎಂದ ಅವರು, ಕಾನೂನು ಬಾಹಿರವಾಗಿ ವಿನಾಕಾರಣ ಸೋನಿಯಾ ಅವರಿಗೆ ಕಿರುಕುಳ ನೀಡುತ್ತಿರುವ ಪ್ರಧಾನಿ ಮೋದಿ ಅವರೇ, ಅಧಿಕಾರ ಶಾಶ್ವತವಲ್ಲ. 2024ರ ಚುನಾವಣೆಯಲ್ಲಿ ಜನರು ಬಿಜೆಪಿಗೆ ತಕ್ಕ ಪಾಠ ಕಲಿಸುತ್ತಾರೆ ಎಂದು ಗುಡುಗಿದರು.

ಸೋನಿಯಾ, ರಾಹುಲ್ ಅವರನ್ನೇ ನಾವು ಬಿಟ್ಟಿಲ್ಲ ಎಂಬ ಸಂದೇಶ ಕೊಡಲು ಹೀಗೆ ಮಾಡಲಾಗುತ್ತಿದೆ. ಆದರೆ ಕಾಂಗ್ರೆಸ್ ಮುಖಂಡರು, ಇಂತಹ ಬೆದರಿಕೆಗಳಿಗೆ ಹೆದರುವುದಿಲ್ಲ. ನಾವೇನು ಬಳೆ ತೊಟ್ಟುಕೊಂಡಿಲ್ಲ ಎಂದು ಹೇಳಿದರು.

ಪ್ರಧಾನಿ ಮೋದಿ ಅವರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಸಿದ್ಧರಾಮಯ್ಯ, ಮಾತೆತ್ತಿದರೆ 'ಅಚ್ಛೇದಿನ್ ಆಯೇಗ', 'ಸಬ್ ಕಾ ಸಾಥ್ ಸಬ್ ಕಾ ವಿಕಾಸ್' ಎನ್ನುವ ಮೋದಿ ಅವರು, ಅಧಿಕಾರಕ್ಕೆ ಬಂದು ಎಂಟು ವರ್ಷಗಳಲ್ಲಿ ಅವರು ಹೇಳಿದ್ದೇನು, ಮಾಡಿದ್ದೇನು? ಅಕ್ಕಿ, ಜೋಳ, ರಾಗಿ, ಮಂಡಕ್ಕಿ, ಅಡುಗೆ ಎಣ್ಣೆ ಸೇರಿದಂತೆ ಎಲ್ಲಾ ಆಹಾರ ಧಾನ್ಯಗಳ ಮೇಲೆ ಜಿಎಸ್‌ಟಿ ವಿಧಿಸಿ ಬೆಲೆ ಏರಿಕೆ ಮಾಡುವ ಮೂಲಕ ಜನರ ರಕ್ತ ಕುಡಿಯುತ್ತಿದ್ದಾರೆ ಎಂದು ಕಿಡಿಕಾರಿದರು.

ಬಿಜೆಪಿ ನಾಯಕರು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಧರ್ಮಾಧಾರಿತ ರಾಜಕಾರಣ ಮಾಡುತ್ತಿದ್ದಾರೆ. ಇವರು ಮಕ್ಕಳ ಪಠ್ಯಪುಸ್ತಕದಲ್ಲಿ ಧರ್ಮದ ವಿಷಬೀಜ ಬಿತ್ತುತ್ತಿದ್ದಾರೆ. ಚರಿತ್ರೆ ತಿರುಚುವ ಕೆಲಸ ಮಾಡಿದರು. ಭಾವನಾತ್ಮಕ ಕೆಲಸಗಳಿಂದ ಎತ್ತಿಕಟ್ಟುವ (5ನೇ ಪುಟಕ್ಕೆ)

# ಸ್ಥಳೀಯರು-ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ನೀತಿಗೆ ಸಂಪುಟ ಅಸ್ತು

ಬೆಂಗಳೂರು, ಜು. 22 - ಸ್ಥಳೀಯರು ಮತ್ತು ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ಹೊಸ ನೀತಿಗೆ ರಾಜ್ಯ ಸಚಿವ ಸಂಪುಟ ಹಸಿರು ನಿಶಾನೆ ನೀಡಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ. ಮಾಧುಸ್ವಾಮಿ, ಯಾವುದೇ ಕೈಗಾರಿಕೆಗಳು ತಾನು ಹೂಡುವ ಬಂಡವಾಳಕ್ಕೆ ಅನುಗುಣವಾಗಿ ಉದ್ಯೋಗ ಸೃಷ್ಟಿ ಮಾಡಿಕೊಳ್ಳಬೇಕು ಎಂದಿದ್ದಾರೆ.

ಸೃಷ್ಟಿಯಾಗುವ ಎಲ್ಲಾ ಹಂತದ ಹುದ್ದೆಗಳನ್ನು ಸ್ಥಳೀಯರು ಮತ್ತು ಕನ್ನಡಿಗರಿಗೇ ನೀಡಬೇಕು. ಅಷ್ಟೇ ಅಲ್ಲ ಇನ್ನು ಮುಂದೆ ಯಾವುದೇ ಕೈಗಾರಿಕೆ ತನ್ನ ಉದ್ಯಮವನ್ನು ವಿಸ್ತರಿಸುವ ಸಂದರ್ಭದಲ್ಲೂ ಅದೇ ಪ್ರಮಾಣದಲ್ಲಿ ಹೊಸ ಉದ್ಯೋಗ ಸೃಷ್ಟಿಯಾಗಬೇಕು ಎಂದವರು ಹೇಳಿದ್ದಾರೆ.

ಉದಾಹರಣೆಗೆ 100 ಕೋಟಿ ರೂ. ಬಂಡವಾಳ ಹೂಡಿಕೆ ಮಾಡಿ, ತನ್ನ ಸಂಸ್ಥೆಯನ್ನು ವಿಸ್ತರಿಸಿದರೆ ಸರ್ಕಾರ ನಿಗದಿಪಡಿಸಿದ ಪ್ರಮಾಣದಲ್ಲಿ ಹೆಚ್ಚುವರಿ ಉದ್ಯೋಗ ಸೃಷ್ಟಿಯಾಗಬೇಕು. ಅವು ನಮ್ಮವರಿಗೇ ದೊರೆಯಬೇಕು.

ರಾಜ್ಯದಲ್ಲಿ ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತಿದೆ. ಇರುವ ಉದ್ಯೋಗಗಳು ಬೇರೆ ರಾಜ್ಯದ ಯುವಕರ ಪಾಲಾಗುತ್ತಿವೆ. ಇದನ್ನು ತಪ್ಪಿಸುವ ಉದ್ದೇಶದಿಂದ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಮುಂದಿನ 2025 ರವರೆಗೂ ಈ ನೀತಿ ಜಾರಿಯಲ್ಲಿರುತ್ತದೆ ಎಂದರು.

ರಸಗೊಬ್ಬರ ದಾಸ್ತಾನಿಗಾಗಿ ಕರ್ನಾಟಕ ರಾಜ್ಯ ಬೀಜ ನಿಗಮ ನಿಯಮಿತ ಮತ್ತು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಗೆ ತಲಾ ರೂ. 200 ಕೋಟಿಗಳ ದುಡಿಯುವ ಬಂಡವಾಳ ಸಾಲ ನೀಡುವುದಾಗಿ ರಾಜ್ಯ ಸರ್ಕಾರ ಖಾತ್ರಿ ಪಡಿಸಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

75ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಕೇಂದ್ರ ಸರ್ಕಾರದ ಮಾರ್ಗಸೂಚಿ (4ನೇ ಪುಟಕ್ಕೆ)

# ಸಿಬಿಎಸ್‌ಇ : 10ನೇ ತರಗತಿಗೆ ಶೇ.94.40, 12ನೇ ತರಗತಿಗೆ ಶೇ.92.7ರ ಫಲಿತಾಂಶ



ನವದೆಹಲಿ, ಜು. 22 – ಶುಕ್ರವಾರದಂದು ಸಿ.ಬಿ.ಎಸ್.ಇ. ಹತ್ತು ಹಾಗೂ 12ನೇ ತರಗತಿ ಫಲಿತಾಂಶ ಪ್ರಕಟಿಸಲಾಗಿದೆ. ಹತ್ತನೇ ತರಗತಿಯ ವಿದ್ಯಾರ್ಥಿಗಳು ಶೇ.94.40 ಹಾಗೂ 12ನೇ ತರಗತಿಯ ವಿದ್ಯಾರ್ಥಿಗಳು ಶೇ.92.7ರ ಫಲಿತಾಂಶ ಪಡೆದಿದ್ದಾರೆ.

12ನೇ ತರಗತಿಯಲ್ಲಿ 1.34 ಲಕ್ಷ ವಿದ್ಯಾರ್ಥಿಗಳು ಶೇ.95ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 33,432 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ.

ಹತ್ತನೇ ತರಗತಿಯಲ್ಲಿ 64,908 ವಿದ್ಯಾರ್ಥಿಗಳು ಶೇ.95ಕ್ಕೂ ಹೆಚ್ಚು ಅಂಕ ಗಳಿಸಿದ್ದಾರೆ. 2.36 ಲಕ್ಷ ವಿದ್ಯಾರ್ಥಿಗಳು ಶೇ.90ಕ್ಕೂ ಹೆಚ್ಚು ಅಂಕ ಪಡೆದಿದ್ದಾರೆ.

ಕಳೆದ ಎರಡು ವರ್ಷಗಳ ರೀತಿಯಲ್ಲೇ ಈ ವರ್ಷವೂ ಮೆರಿಟ್ ಪಟ್ಟಿ ಪ್ರಕಟಿಸದಿರಲು ಸಿ.ಬಿ.ಎಸ್.ಇ. ನಿರ್ಧರಿಸಿದೆ.

ಅನಾರೋಗ್ಯಕರ ಸ್ಪರ್ಧೆ ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

## 'ಸೂರರೈ ಪೋಟ್ರು' ಅತ್ಯುತ್ತಮ ಚಲನಚಿತ್ರ

ನವದೆಹಲಿ, ಜು. 22 – ತಮಿಳು ಚಿತ್ರ 'ಸೂರರೈ ಪೋಟ್ರು'ಗೆ ಅತ್ಯುತ್ತಮ ಚಿತ್ರ ಎಂಬ ರಾಷ್ಟ್ರೀಯ ಪ್ರಶಸ್ತಿ ದೊರೆತಿದೆ. 68ನೇ ರಾಷ್ಟ್ರೀಯ ಚಲನಚಿತ್ರೋತ್ಸವ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ.

'ಸೂರರೈ ಪೊಟ್ರು' ಚಿತ್ರಕ್ಕಾಗಿ ಶಾಲಿನಿ ಉಷಾ ನಾಯರ್ ಅವರಿಗೆ ಅತ್ಯುತ್ತಮ ಚಿತ್ರಕಥೆ ಪ್ರಶಸ್ತಿ ಸಹ ದೊರೆತಿದೆ. ಇದೇ ಚಿತ್ರಕ್ಕಾಗಿ ನಿರ್ದೇಶಕಿ ಸುಧಾ ಕೊಂಗರ ಹಾಗೂ ಹಿನ್ನೆಲೆ ಸಂಗೀತಕ್ಕಾಗಿ ಜಿ.ವಿ. ಪ್ರಕಾಶ್ ಕುಮಾರ್ ಪ್ರಶಸ್ತಿ ಪಡೆದಿದ್ದಾರೆ. ಮಲಯಾಳಂ ಚಿತ್ರ ನಿರ್ದೇಶಕ ಕೆ.ಆರ್. ಸಚ್ಚಿದಾನಂದನ್ ಅವರು ಮರಣೋತ್ತರವಾಗಿ 'ಅಯ್ಯಪ್ಪುಂ ಕೋಶಿಯಂ' ಚಿತ್ರಕ್ಕಾಗಿ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಪಡೆದಿದ್ದಾರೆ. 'ತಾನಾಜಿ' ಚಿತ್ರಕ್ಕಾಗಿ ಅಜಯ್ ದೇವಗನ್ ಹಾಗೂ 'ಸೂರರೈ ಪೊಟ್ರು' ಚಿತ್ರಕ್ಕಾಗಿ ಸೂರ್ಯ ಅವರು ಶ್ರೇಷ್ಠ ನಟ ಪ್ರಶಸ್ತಿ ಹಂಚಿಕೊಂಡಿದ್ದಾರೆ. 'ಸೂರರೈ ಪೊಟ್ರು' ಚಿತ್ರಕ್ಕಾಗಿ ಅಪರ್ಣ ಬಾಲಮುರಳಿ ಅವರು ಶ್ರೇಷ್ಠ ನಟಿ ಪ್ರಶಸ್ತಿ ಪಡೆದಿದ್ದಾರೆ.

## ಕೇರಳದಲ್ಲಿ ಮೂರನೇ ಮಂಕಿಪಾಕ್ಸ್ ಪ್ರಕರಣ ಪತ್ತೆ


ತಿರುವನಂತಪುರಂ, ಜು. 22 – ಈ ತಿಂಗಳ ಆರಂಭದಲ್ಲಿ ಯು.ಎ.ಇ.ಯಿಂದ ಬಂದಿದ್ದ 35 ವರ್ಷದ ವ್ಯಕ್ತಿಯೊಬ್ಬರಲ್ಲಿ ಮಂಕಿಪಾಕ್ಸ್ ಸೋಂಕು ಕಾಣಿಸಿಕೊಂಡಿದೆ. ಇದು ದೇಶದಲ್ಲಿ ಹಾಗೂ ಕೇರಳದಲ್ಲಿ ಕಂಡು ಬಂದಿರುವ ಮೂರನೇ ಸೋಂಕು ಪ್ರಕರಣವಾಗಿದೆ. ಮಲಪ್ಪುರಂನ ನಿವಾಸಿ ಜುಲೈ 6ರಂದು ಯು.ಎ.ಇ. ಯಿಂದ ಬಂದಿದ್ದರು. ಅವರಿಗೆ ಜುಲೈ 13ರಿಂದ ಜ್ವರ ಕಾಣಿಸಿಕೊಂಡಿತ್ತು. ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ.



**ಅಜ್ಜಿ ಹಬ್ಬ** ದಾವಣಗೆರೆಯ ನಿಟುವಳ್ಳಿಯಲ್ಲಿ ಅಜ್ಜಿ ಹಬ್ಬವನ್ನು ಶ್ರದ್ಧಾ ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು.

# ಬಿಎಸ್‌ವೈ ಚುನಾವಣಾ ರಾಜಕೀಯ ನಿವೃತ್ತಿ

## ಶಿಕಾರಿಪುರ ಕ್ಷೇತ್ರದಿಂದ ಪುತ್ರ ವಿಜಯೇಂದ್ರ ಸ್ಪರ್ಧೆ ಎಂದ ಮಾಜಿ ಮುಖ್ಯಮಂತ್ರಿ



ಬೆಂಗಳೂರು, ಜು. 22 - ಚುನಾವಣಾ ರಾಜಕೀಯ ನಿವೃತ್ತಿ ಘೋಷಣೆ ಮಾಡಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಸಕ್ರಿಯ ರಾಜಕಾರಣದಲ್ಲಿ ಮುಂದುವರೆಯುವುದಾಗಿ ತಿಳಿಸಿದ್ದಾರೆ.

ತಮ್ಮಿಂದ ತೆರವಾಗಲಿರುವ ಶಿಕಾರಿಪುರ ವಿಧಾನಸಭಾ ಕ್ಷೇತ್ರದಲ್ಲಿ ನನ್ನ ಪುತ್ರ, ಬಿಜೆಪಿಯ ರಾಜ್ಯ ಉಪಾಧ್ಯಕ್ಷ ಬಿ.ವೈ ವಿಜಯೇಂದ್ರ ಚುನಾವಣಾ ಕಣಕ್ಕಿಳಿಯಲಿದ್ದಾರೆ ಎಂದು ಘೋಷಣೆ ಮಾಡಿದ್ದಾರೆ.

ಕ್ಷೇತ್ರದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಹಠಾತ್ತನೆ ತಮ್ಮ ರಾಜಕೀಯ ನಿರ್ಧಾರವನ್ನು ಪ್ರಕಟಿಸಿರುವುದು ರಾಜ್ಯ ಬಿಜೆಪಿಯಲ್ಲಿ ತಲ್ಲಣವುಂಟು ಮಾಡಿದೆ.

ವಿಧಾನಸಭಾ ಚುನಾವಣೆಗೆ ಇನ್ನೂ ಹತ್ತು ತಿಂಗಳು ಬಾಕಿ ಇರುವ ಮುನ್ನವೇ ಶಿಕಾರಿಪುರ ಕ್ಷೇತ್ರದಿಂದ ನನ್ನ ಪುತ್ರನೇ ಕಣಕ್ಕಿಳಿಯುತ್ತಾನೆ ಎಂದು ಘೋಷಣೆ ಮಾಡಿರುವುದು ಪಕ್ಷದ ನಾಯಕರಿಗೆ ಅಚ್ಚರಿವುಂಟು ಮಾಡಿದೆ.

ಅಭ್ಯರ್ಥಿಗಳ ಆಯ್ಕೆ ಪಕ್ಷದ ವರಿಷ್ಠರದ್ದೇ ಅಂತಿಮ. ದೆಹಲಿ ನಾಯಕರ ನಿರ್ಧಾರವನ್ನೂ ಕಾಯದೇ ಘೋಷಣೆ ಮಾಡಿರುವುದು ನಾನಾ ಊಹಾಪೋಹಗಳಿಗೆ ಕಾರಣವಾಗಿದೆ.

ವಿಜಯೇಂದ್ರ ಅವರನ್ನು ಬೊಮ್ಮಾಯಿ ಸಂಪುಟದಲ್ಲಿ ಮಂತ್ರಿ ಮಾಡಬೇಕೆಂದು ಬಹಳ ಕಸರತ್ತು ತೆರೆಮರೆಯಲ್ಲಿ ನಡೆಸಿದ್ದರು. ಅಷ್ಟೇ ಅಲ್ಲ, ವಿಧಾನಸಭೆಯಿಂದ ವಿಧಾನಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ವಿಜಯೇಂದ್ರನಿಗೆ ಟಿಕೆಟ್ ದೊರೆಯುತ್ತದೆ ಎಂಬ ಮಹದಾಸೆ ಇಟ್ಟುಕೊಂಡಿದ್ದರು.

ಇದಕ್ಕೆ ಪಕ್ಷದ ವರಿಷ್ಠರು, ಅದರಲ್ಲೂ ರಾಷ್ಟ್ರೀಯ ಸಂಘಟನಾ (5ನೇ ಪುಟಕ್ಕೆ)

## ದೇಶದ ಸಂಪನ್ಮೂಲದಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕು : ಗುಜರಾತ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಅಹಮದಾಬಾದ್, ಜು. 22 – ದೇಶದ ಸಂಪನ್ಮೂಲದಲ್ಲಿ ಅಲ್ಪಸಂಖ್ಯಾತರಿಗೆ ಮೊದಲ ಹಕ್ಕಿದೆ ಎಂದು ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಜಗದೀಶ್ ಠಾಕೂರ್ ನೀಡಿದ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ.

ನಂತರದಲ್ಲಿ ಪ್ರತಿಭಟನೆ ನಡೆಸಿರುವ ಭಜರಂಗ ದಳ, ಕಾಂಗ್ರೆಸ್ ಕೇಂದ್ರ ಕಚೇರಿಗೆ 'ಹಜ್ ಭವನ' ಎಂಬ ಮಸಿ ಬಳಿಯುವ ಮೂಲಕ ಆಕ್ರೋಶ ವ್ಯಕ್ತಪಡಿಸಿದೆ. ಈ ಬಗ್ಗೆ ಪೊಲೀಸರಲ್ಲಿ ದೂರು ದಾಖಲಿಸುವುದಾಗಿ ಕಾಂಗ್ರೆಸ್ ಹೇಳಿದೆ.

**ಕಾಂಗ್ರೆಸ್ ಕಚೇರಿಗೆ 'ಹಜ್ ಭವನ' ಎಂಬ ಮಸಿ ಬಳಿದ ಭಜರಂಗ ದಳ**

ಕಳೆದ ಬುಧವಾರ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಠಾಕೂರ್, ಅಲ್ಪಸಂಖ್ಯಾತರಿಗೆ ದೇಶದ ಸಂಪನ್ಮೂಲದಲ್ಲಿ ಮೊದಲ ಹಕ್ಕಿದೆ ಎಂಬ ಮಾಜಿ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ (4ನೇ ಪುಟಕ್ಕೆ)

## ಲಂಕಾ ನೂತನ ಪ್ರಧಾನಿಯಾಗಿ ದಿನೇಶ್

ಕೊಲಂಬೊ, ಜು. 22 – ರಾಜಪಕ್ಷೆ ಕುಟುಂಬದ ನಿಕಟವರ್ತಿಯಾಗಿರುವ ಹಿರಿಯ ರಾಜಕಾರಣಿ ದಿನೇಶ್ ಗುಣವರ್ಧನೆ ಅವರನ್ನು ಶ್ರೀಲಂಕಾದ ನೂತನ ಪ್ರಧಾನ ಮಂತ್ರಿಯಾಗಿ ನೇಮಿಸಲಾಗಿದೆ. ಇದೇ ವೇಳೆ 18 ಸಚಿವರ ಸಂಪುಟವನ್ನು ರಚಿಸಲಾಗಿದೆ. ಎಡಪಂಥೀಯ ನಾಯಕರಾಗಿರುವ ಗುಣವರ್ಧನೆ ಈ ಹಿಂದೆ ವಿದೇಶಾಂಗ ಸಚಿವ ಹಾಗೂ ಶಿಕ್ಷಣ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

# ಸಿದ್ದರಾಮಯ್ಯ ಅಮೃತ ಮಹೋತ್ಸವ ಚುನಾವಣಾ ದಿಕ್ಸೂಚಿ



ಹರಿಹರ, ಜು. 22 - 2023ರಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯ ರಾಜಕೀಯ ದಿಕ್ಸೂಚಿಯಾಗಿ ಜಿಲ್ಲೆಯಲ್ಲಿ ನಡೆಯಲಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಮೃತ ಮಹೋತ್ಸವ ಸಾಕ್ಷಿಯಾಗಲಿದೆ ಎಂದು ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹೇಳಿದರು.

ನಗರದ ವಿದ್ಯಾನಗರ ಸಮೀಪ ಎಸ್.ರಾಮಪ್ಪ ಅಭಿಮಾನಿ ಬಳಗದಿಂದ ಶಾಸಕ ಎಸ್. ರಾಮಪ್ಪ ಅವರ 65ನೇ ಹುಟ್ಟು ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ ಹಾಗೂ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ರಾಮಪ್ಪ ಅವರ ಸೇವೆ ತಾಲ್ಲೂಕಿನಲ್ಲಿ ಅತ್ಯುತ್ತಮವಾಗಿದೆ. ಸರಳತೆಯಿಂದ ಜನಸಾಮಾನ್ಯರ ಮನಸ್ಸನ್ನು ಗೆದ್ದಿದ್ದಾರೆ. ಚುನಾವಣೆ ಸಮೀಪಿಸುತ್ತಿದ್ದು ಮುಂದಿನ ದಿನಗಳಲ್ಲಿ ರಾಮಪ್ಪ ಮತ್ತೆ ಶಾಸಕರಾಗಿ ಬರಲಿ ಎಂದು ಶುಭ ಕೋರಿದರು.

### ಹರಿಹರ: ಸರ್ವಧರ್ಮ ಸಾಮೂಹಿಕ ವಿವಾಹ ಮಹೋತ್ಸವ, ಅಭಿನಂದನಾ ಸಮಾರಂಭದಲ್ಲಿ ಎಸ್ಸೆಸ್ಸೆಂ

ಶಾಸಕ ಜಮೀರ್ ಅಹಮದ್ ಮಾತನಾಡಿ, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ರಾಮಪ್ಪನವರು ಗೆದ್ದು ಬರಲಿ. ಹರಿಹರ ಕ್ಷೇತ್ರದಲ್ಲಿನ ಜನರ ಹುಮ್ಮಸ್ಸು ನೋಡಿದರೆ, ಈ ಬಾರಿಯೂ ರಾಮಪ್ಪ ಮತ್ತೆ ಗೆಲ್ಲುವುದರಲ್ಲಿ ಸಂದೇಹವಿಲ್ಲ. ರಾಮಪ್ಪನವರು ಒಬ್ಬ ಎಂಎಲ್‌ಎ ಆಗಿ ಕೆಲಸ ಮಾಡುತ್ತಿಲ್ಲ.ಅವರು ಒಬ್ಬ ಪ್ಯೂನ್ ಆಗಿ ಜನರ ಸೇವೆ ಮಾಡಿದ್ದಾರೆ. ಅವರಿಗೆ ಬಿಜೆಪಿಯವರು ಕೋಟಿ ಕೋಟಿ ಹಣವನ್ನು ನೀಡುವ ಆಸೆ ಒಡ್ಡಿದ್ದರೂ ಅವರು ಕಾಂಗ್ರೆಸ್ ಪಕ್ಷವನ್ನು ಬಿಟ್ಟಿಲ್ಲ. ಅವರನ್ನು ಮತ್ತೆ ಗೆಲ್ಲಿಸುವ ಜವಾಬ್ದಾರಿ ನಿಮ್ಮ ಮೇಲಿದೆ ಎಂದು ಹೇಳಿದರು.

ಮಾಜಿ ಸಚಿವ ಎಚ್.ಆಂಜನೇಯ ಮಾತನಾಡಿ, ಸಿದ್ದರಾಮಯ್ಯ ಅವರು ಎಲ್ಲಾ ಧರ್ಮ, ಜಾತಿಯ ಜನರ ಕಷ್ಟಗಳಿಗೆ ಸ್ಪಂದಿಸಿ ಅವರ ಕಣ್ಣೀರನ್ನು ಒರೆಸಿದ್ದಾರೆ. ರಾಮಪ್ಪ ಅವರ 65ನೇ ಹುಟ್ಟು ಹಬ್ಬವನ್ನು ಇಂದು ಆಚರಿಸುತ್ತಿದ್ದೇವೆ. ಮುಂದಿನ ತಿಂಗಳು ಸಿದ್ದರಾಮಯ್ಯನವರ 75ನೇ ಹುಟ್ಟು ಹಬ್ಬದ ಆಚರಣೆ ಹಮ್ಮಿಕೊಂಡಿರುವುದು ಪಕ್ಷಕ್ಕೆ ಶಕ್ತಿದಾಯಕವಾಗಿದೆ ಎಂದು ಹೇಳಿದರು.

ಪಂಚಮಸಾಲಿ ಪೀಠದ ಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮೀಜಿ ಮಾತನಾಡಿ, ರಾಜ್ಯದಲ್ಲಿ ದೇವರಾಜ್ ಅರಸು ಅವರ ಆಡಳಿತವನ್ನು ಬಿಟ್ಟರೆ ನಂತರ ಸಿದ್ದರಾಮಯ್ಯನವರ ಆಡಳಿತವೇ ಉತ್ತಮವಾಗಿತ್ತು ಎಂದರು.

ಶಾಸಕ ಎಸ್.ರಾಮಪ್ಪ ಮಾತನಾಡಿ, ಯಾವುದೇ ಕಪ್ಪು ಚುಕ್ಕೆ ಇಲ್ಲದೇ ಜನ ಪರವಾದ ಯೋಜನೆಗಳನ್ನು ಜನಸಾಮಾನ್ಯರಿಗೆ ನೀಡಿದ ಸಿದ್ದರಾಮಯ್ಯನವರ ಕೊಡುಗೆ ಅಪಾರ. ರಾಜ್ಯದಲ್ಲಿ ಈ ಬಾರಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ (4ನೇ ಪುಟಕ್ಕೆ)

# ಆ.1ಕ್ಕೆ ಭೋವಿ ಸಮಾಜದ ಸಿದ್ಧರಾಮೇಶ್ವರ ಶ್ರೀಗಳ 60ನೇ ವರ್ಷದ ವಜ್ರ ಮಹೋತ್ಸವ



ಹೊನ್ನಾಳಿ, ಜು.22- ಭೋವಿ ಸಮಾಜದ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿಯವರ 60ನೇ ವರ್ಷದ ರಾಜ್ಯ ಮಟ್ಟದ ವಜ್ರ ಮಹೋತ್ಸವ ಕಾರ್ಯಕ್ರಮವು ಬರುವ ಆಗಸ್ಟ್ 1 ರಂದು ದಾವಣಗೆರೆ ನಗರದ ವೆಂಕಾಭೋವಿ ಕಾಲೋನಿಯಲ್ಲಿ ನಡೆಯಲಿದ್ದು, ಈ ಕಾರ್ಯಕ್ರಮದಲ್ಲಿ ರಾಜ್ಯ ಹಾಗೂ ಅಂತರ ರಾಜ್ಯದ ಭೋವಿ ಸಮಾಜದ ಒಂದು ಲಕ್ಷಕ್ಕೂ ಅಧಿಕ ಜನರು ಭಾಗವಹಿಸಲಿದ್ದಾರೆ ಎಂದು ಭೋವಿ ಸಮಾಜದ ಚಿತ್ರದುರ್ಗ ಮತ್ತು ಬಾಗಲಕೋಟೆ ಮಠದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ಪಟ್ಟಣದ ಉಪನ್ಯಾಸಕ ಹೆಚ್.ಬಸವರಾಜ್ ಅವರ ಮನೆಗೆ ಶುಕ್ರವಾರ ಭೇಟಿ ನೀಡಿ ಮುಖಂಡರ ಜೊತೆ ಸಮಾಲೋಚನೆ ಸಭೆ ನಡೆಸಿದ ಬಳಿಕ ಅವರು ಮಾತನಾಡಿದರು.

ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನ ಭೋವಿ ಸಮಾಜದವರು ನೆಲೆಸಿರುವ ಗ್ರಾಮಗಳಿಗೆ ಭೇಟಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ನಾವು ಜಾಗೃತಿ ಮೂಡಿಸುತ್ತೇವೆ. ದೇಶದ 20ಕ್ಕೂ ಅಧಿಕ ರಾಜ್ಯ, ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕುಗಳ ಜನರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ನಾನಾ ಕಲಾ ತಂಡಗಳಿಂದ ಕೂಡಿ ಒಂದು ರೀತಿ ಮೈಸೂರು ದಸರಾ ವೈಭವದ ರೀತಿಯಲ್ಲಿ ಲಿಂ. ಸಿದ್ಧರಾಮೇಶ್ವರ ಸ್ವಾಮೀಜಿ ಅವರ 60ನೇ ವರ್ಷದ ರಾಜ್ಯ ಮಟ್ಟದ ವಜ್ರಮಹೋತ್ಸವ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಪ್ರಾಚೀನ ಕಾಲದಿಂದಲೂ (4ನೇ ಪುಟಕ್ಕೆ)

# ಬಂಡಾಯ ಸಾಹಿತ್ಯ ; ಸೇಫರ್ ಝೋನ್ ಚಿಂತಕರಿಂದ ಮುಕ್ತವಾಗಬೇಕು

ಅಜಮಾಸು ಹತ್ತು ವರುಷಗಳಿಗೂ ಹೆಚ್ಚು ಕಾಲ ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ ಜರುಗಿದ ನೆನಪಿಲ್ಲ. ಪ್ರಾಯಶಃ ಶಿವಮೊಗ್ಗದ ಸಮ್ಮೇಳನವೇ ಈ ಹಿಂದಿನದಿರಬಹುದು.? ಆದರೆ ಬಂಡಾಯ ಸಾಹಿತ್ಯ ಸಂಘಟನೆಯ ಚಟುವಟಿಕೆಗಳು ನಿರಂತರ ಅಲ್ಲದಿದ್ದರೂ ಅಲ್ಲಲ್ಲಿ ಆಗಾಗ ಜರುಗಿರುವುದನ್ನು ಅಲ್ಲಗಳೆಯಲಾಗದು. ಬೆಂಗಳೂರು, ತುಮಕೂರು, ಚಿತ್ರದುರ್ಗ, ಬಳ್ಳಾರಿ, ಬೆಳಗಾವಿ... ಹೀಗೆ ನಾಡಿನ ನಾನಾ ಕಡೆ ಹತ್ತು ಹಲವು ಸಾಂಸ್ಕೃತಿಕ ಸಮಾವೇಶಗಳು ಜರುಗಿದ ದಟ್ಟ ನೆನಪಿದೆ.





ಇದೀಗ ಬಂಡಾಯದ ಸಂಗಾತಿಗಳಾದ ಬಿ. ಎನ್.ಮಲ್ಲೇಶ್ ಮತ್ತು ಎ.ಬಿ. ರಾಮಚಂದ್ರಪ್ಪ ಅವರುಗಳ ಸಂಚಾಲಕತ್ವದಲ್ಲಿ ರಾಜ್ಯ ಬಂಡಾಯ ಸಾಹಿತ್ಯ ಸಮ್ಮೇಳನವು ಜುಲೈ 23 ಮತ್ತು 24 ರಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಕುವೆಂಪು ಕನ್ನಡ ಭವನದಲ್ಲಿ ಜರುಗಲಿದೆ.


ಇದು, ದಾವಣಗೆರೆಯಲ್ಲಿ ಜರುಗುತ್ತಿರುವ ಬಂಡಾಯ ಸಾಹಿತ್ಯದ ಎರಡನೇ ಸಮ್ಮೇಳನ. ಮುವತ್ತಾರು ವರ್ಷಗಳ ಹಿಂದೆ 1986 ರಲ್ಲಿ ನಗರದ ರಾಜನಹಳ್ಳಿ ಹನುಮಂತಪ್ಪ ಛತ್ರದಲ್ಲಿ ಆರನೇ ಬಂಡಾಯ ಸಾಹಿತ್ಯ ಸಮ್ಮೇಳನ ಮೊದಲ ಬಾರಿಗೆ ಜರುಗಿತ್ತು. ಅಂದು ಕಾಂ. ಪಂಪಾಪತಿ, ಕಾಂ. ಎಚ್. ಕೆ. ರಾಮಚಂದ್ರಪ್ಪ, ಕಾಂ. ಎಂ. ಜಿ. ತಿಪ್ಪೇಸ್ವಾಮಿ ಇನ್ನೂ ಅನೇಕ ಎಡಪಂಥೀಯ ಚಿಂತನೆಗಳ ಹಿರಿಯರು ಅಂದಿನ ಬಂಡಾಯ ಸಾಹಿತ್ಯ ಸಮ್ಮೇಳನದ ಉಸ್ತುವಾರಿಗಳಾಗಿದ್ದರು.

ಹಾಗೆ ನೋಡಿದರೆ ದಾವಣಗೆರೆ ನಗರ ಸಮ್ಮೇಳನಗಳ ಮಹಾನಗರ. ಸಾಹಿತ್ಯ, ಸಂಗೀತ, ರಂಗಭೂಮಿ, ಜನಪದ ಹೀಗೆ ಅನೇಕ ಸಾಂಸ್ಕೃತಿಕ ಸಮ್ಮೇಳನಗಳು ಈ ಊರಲ್ಲಿ ಜರುಗುವಷ್ಟು ಬೇರೆಲ್ಲೂ ಜರುಗಲಾರವು. ಅಲ್ಲದೇ ಪ್ರಗತಿಪರ ಸಮಾಲೋಚನೆಯ ಸಮಾವೇಶಗಳು ಕರ್ನಾಟಕದ ನಡುನಾಡಾಗಿರುವ ದಾವಣಗೆರೆಯಲ್ಲಿ ಜರುಗುತ್ತವೆ. ಎಪ್ಪತ್ತರ ದಶಕದಲ್ಲಿ ನಿರಂಜನ ಮತ್ತು ಬಸವರಾಜ ಕಟ್ಟೀಮನಿ ಅವರು ಕಟ್ಟಿದ ಪ್ರಗತಿಪರ ಆಶಯಗಳ ಪ್ರಗತಿಪಂಥ ಸಾಹಿತ್ಯ ಸಮ್ಮೇಳನ 1976 ರಲ್ಲಿ ದಾವಣಗೆರೆಯ ಸುನಂದ ರಂಗ ಮಂಟಪದಲ್ಲಿ ಯಶಸ್ವಿಯಾಗಿ ಜರುಗಿದೆ. ರಷಿಯಾದ ಸಾಂಸ್ಕೃತಿಕ ಚಿಂತಕ ಮತ್ವಂತೀನ್ ದಷ್ಕೋ ಎಂಬುವರು ಪ್ರಗತಿಪಂಥ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ ನೆನಪು ನನ್ನದು. ಆ ಸಂದರ್ಭದಲ್ಲಿ 'ಜನತಾವಾಣಿ' ಸಂಸ್ಥಾಪಕ ಸಂಪಾದಕರಾಗಿದ್ದ ಹೆಚ್.ಎನ್. ಷಡಾಕ್ಷರಪ್ಪ ಸಂಪಾದಕತ್ವದಲ್ಲಿ ಸ್ಮರಣೆ ಸಂಚಿಕೆ ಪ್ರಕಟಗೊಂಡಿದೆ. ಸಾಹಿತ್ಯ, ಸಂಸ್ಕೃತಿ ಮಾತ್ರವಲ್ಲದೇ, ಈ ಊರಲ್ಲಿ ಮಹತ್ವದ ಕೆಲವು ರಾಜಕೀಯ ಸಮ್ಮೇಳನಗಳು ಜರುಗಿವೆ. ತನ್ಮೂಲಕ ಕರ್ನಾಟಕ ರಾಜಕೀಯದ ಐತಿಹಾಸಿಕ ತಿರುವುಗಳಿಗೆ ಅವು ಕಾರಣವಾಗಿವೆ.

ಈಗ್ಗೆ ಎರಡೇ ಎರಡು ತಿಂಗಳ ಹಿಂದೆ ಮೇ 27 ಮತ್ತು 28 ರಂದು ನಮ್ಮ ದಾವಣಗೆರೆಯಲ್ಲಿ ಎರಡು ದಿನಗಳ ಕಾಲದ ಎಂಟನೇ 'ಮೇ ಸಾಹಿತ್ಯ ಸಮ್ಮೇಳನ' ಜರುಗಿತು. ಸಾಹಿತ್ಯದ ಸವಿರುಚಿ ಜತೆಗೆ ಭರ್ಜರಿ ಭೋಜನ ಏರ್ಪಡಿಸಿದ್ದನ್ನು ಖಂಡಿತಾ ಮರೆಯಲಾಗದು. ಅದರ ಬೆನ್ನಲ್ಲೇ ಇದೀಗ ಎರಡು ದಿನಗಳ ಕಾಲ ಬಂಡಾಯ ಸಾಹಿತ್ಯ ಸಮ್ಮೇಳನ. ಎರಡೂ ಸಮ್ಮೇಳನಗಳ ಆಶಯ, ಆಸ್ಥೆಗಳಲ್ಲಿ ಫರಕು ಇಲ್ಲ. ಆದರೆ ಇವುಗಳ ಆಯೋಜಕರು ಬೇರೆ, ಬೇರೆ ಆಗಿದ್ದರೂ ಎರಡರ ಆಶಯ ಒಂದೇ. ಎರಡೂ ಸಮಾವೇಶಗಳಲ್ಲಿ ಭಾಗವಹಿಸುವ ಬಹುಪಾಲು ಚಿಂತಕರು, ಸಾಹಿತ್ಯಾಸಕ್ತರ ಮನೋಧರ್ಮ ಒಂದೇ ಬಗೆಯದು.

ಈಗ್ಗೆ ನಲವತ್ನಾಲ್ಕು ವರುಷಗಳ ಹಿಂದೆ 1979 ರ ಮಾರ್ಚ್ ತಿಂಗಳು, ಬೆಂಗಳೂರಿನ ಸಂಪಂಗಿ ರಾಮನಗರದ ದೇವಾಂಗ ಹಾಸ್ಟೆಲ್ ಸಭಾಂಗಣವೇ ಬಂಡಾಯ ಸಾಹಿತ್ಯ ಸಂಘಟನೆಯ ಜನ್ಮಸ್ಥಳ. ಅದೊಂದು ಚಾರಿತ್ರಿಕ ಹುಟ್ಟು. ಧರ್ಮಸ್ಥಳದಲ್ಲಿ ಅಂದು ಜರುಗುತ್ತಲಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ ಗೋಷ್ಠಿಯೊಂದನ್ನು ಏರ್ಪಡಿಸಬೇಕೆಂಬ ಕಲಬುರ್ಗಿಯ ಕವಿ ಡಾ. ಚೆನ್ನಣ್ಣ ವಾಲೀಕಾರ ಅವರ ಮನವಿಯನ್ನು ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ತಿರಸ್ಕರಿಸಿದರು.

ಸಾಹಿತ್ಯದಲ್ಲಿ ದಲಿತ, ಬಲಿತ, ಕಲಿತ ಎಂಬು




ದಿಲ್ಲ ಎಂದು ಕ.ಸಾ.ಪ. ಅಧ್ಯಕ್ಷರು ಕುಹಕವಾಡಿದ ಪರಿಣಾಮವೇ ಬಂಡಾಯ ಸಾಹಿತ್ಯ ಸಂಘಟನೆಯ ಉಗಮಕ್ಕೆ ಮಹಾನ್ ಕಾರಣವಾಯಿತು. ಅಂದಿನ ಕನ್ನಡ ಸಾಹಿತ್ಯ ಪರಿಷತ್ತಿಗೆ ಸೆಡ್ಡು ಹೊಡೆದು ಬಂಡಾಯ ಸಾಹಿತ್ಯ ಸಂಘಟನೆ ಮೊಟ್ಟ ಮೊದಲ ಬಾರಿಗೆ ಜನಪರ ಸಾಹಿತ್ಯ ಚಳವಳಿಯಾಗಿ ರೂಪುಗೊಂಡಿತು. ಅಂತಹದ್ದೊಂದು ಸಾಹಿತ್ಯ ಆಂದೋಲನದಲ್ಲಿ ಸಮಾಜವಾದಿಗಳು, ಮಾರ್ಕ್ಸ್ ವಾದಿಗಳು, ಗಾಂಧೀವಾದಿಗಳು, ಅಂಬೇಡ್ಕರ್ ವಾದಿಗಳು ಪ್ರಜಾಸತ್ತಾತ್ಮಕವಾಗಿ ಕೂಡಿ ಕಟ್ಟಿದ ಜನಪರ ಮತ್ತು ಜೀವಪರ ಸಾಹಿತ್ಯದ ಮನೋಧರ್ಮವಾಗಿ ಹೊರಹೊಮ್ಮಿತು.

ಅವತ್ತಿನಿಂದ ಇವತ್ತಿನ ದಾವಣಗೆರೆ ಸಮ್ಮೇಳನದವರೆಗೂ ಪ್ರೊ. ಬರಗೂರು ರಾಮಚಂದ್ರಪ್ಪ ಬಂಡಾಯ ಸಾಹಿತ್ಯ ಸಂಘಟನೆಯ ಮುಕ್ಕು ಮತ್ತು ಮುಪ್ಪರಿಯದ ಮಹಾ ಚೇತನದಂತೆ ಬಂಡಾಯ ಸಾಹಿತ್ಯದ ಸಂವೇದನೆಗಳನ್ನು ಕಾಪಿಟ್ಟುಕೊಂಡು ಬಂದಿದ್ದಾರೆ. ಏಕೆಂದರೆ ಸಮಾಜವಾದಿ ಸಾಹಿತಿ ಪಿ. ಲಂಕೇಶ್ ಅಂಥವರು ಬಂಡಾಯ ಸಾಹಿತ್ಯ ಸಂಘಟನೆಯನ್ನು ಡಂಬಾಯವೆಂದು ಗೇಲಿ ಮಾಡಿ ಪತ್ರಿಕೆಯಲ್ಲಿ ಬರೆದು ಪ್ರಕಟಿಸಿದಾಗಲೂ ಬರಗೂರು ಧೃತಿಗೆಡದೆ ಬಂಡಾಯ ಸಾಹಿತ್ಯ ಸಂಘಟನೆ ಕಟ್ಟಿ ಬೆಳೆಸಿದ

**36ವರ್ಷಗಳ ನಂತರ 2ನೇ ಬಾರಿಗೆ ದಾವಣಗೆರೆಯಲ್ಲಿ ಇಂದು - ನಾಳೆ ರಾಜ್ಯ ಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನ**

ಕಟ್ಟಾಳು. ಅವರೊಂದಿಗೆ ಅನೇಕರು ಇದ್ದಾರೆ. ಬಂಡಾಯ ಸಾಹಿತ್ಯ ಸಂಘಟನೆಯ ಯಾವುದೇ ಸಮಾರಂಭ, ಸಮಾವೇಶಗಳಿರಲಿ ಉದ್ಘಾಟನಾ ಸಮಾರಂಭದಲ್ಲಿ ಆರಂಭಕ್ಕೆ ಬರಗೂರು ಅವರಿಂದ ಪ್ರಾಸ್ತಾವಿಕ ಮಾತುಗಳು ಖಾಯಂ. ಹಾಗೆಯೇ ಮುಕ್ತಾಯ ಸಮಾರಂಭಕ್ಕೆ ಚಂಪಾ ಅವರಿಂದ ಸಮಾರೋಪ ಮಾತುಗಳು ಖಾಯಂ. ಇದು ಸಾಂಪ್ರದಾಯಿಕ ಪದ್ಧತಿ ಅಲ್ಲದಿದ್ದರೂ ಸಾಂಸ್ಕೃತಿಕ ಪರಂಪರೆಯಂತೆ ಬೆಳೆದು ಬಂದ ಹಕೀಕತ್ತು.

ಈಗ ಚಂದ್ರಶೇಖರ ಪಾಟೀಲರು ನಮ್ಮ ನಡುವೆ ಇಲ್ಲ. ದಾವಣಗೆರೆಯಲ್ಲಿ ಈ ಮೊದಲು ಜರುಗಿದ ಸಮ್ಮೇಳನ ಸಮಯದಲ್ಲಿ ಚಂಪಾ ಇದ್ದರು. ಚೆನ್ನಣ್ಣ ವಾಲೀಕಾರ ಇದ್ದರು. ಆರ್. ವಿ. ಭಂಡಾರಿ ಇದ್ದರು. ಡಿ. ಆರ್. ನಾಗರಾಜ ಇದ್ದರು. ರಂಗಾರೆಡ್ಡಿ, ಬೋಳ ಬಂಡೆಪ್ಪ, ಜಂಬಣ್ಣ ಅಮರಚಿಂತ ಅವರಂತಹ ಅನೇಕ ಹಿರಿಯರನ್ನು ಬಂಡಾಯ ಸಾಹಿತ್ಯ ಸಂಘಟನೆ ಈಗ ಕಳಕೊಂಡಿದೆ. ಅದರಿಂದ ಅದು ಬಡವಾಗಿದೆ. ಹೌದು ಬಂಡಾಯ ಸಂಘಟನಾತ್ಮಕವಾಗಿ ಸೊರಗಿರಬಹುದು. ಆದರೆ ಸಾಹಿತ್ಯದ ಇಳುವರಿ ಬೆಳಸಿನಲ್ಲಿ ಅದು ಸೋತಿಲ್ಲ, ಸೊರಗಿಲ್ಲ. ಲಿಂಗತ್ವದ ಭೇದವಿಲ್ಲದೇ ಲೋಕದ ಜೀವಧಾತುವಿನಂತೆ ಬಂಡಾಯದ ಬೇರುಗಳು ಭೂಮಿ ಮೂಲಕ್ಕಿಳಿದಿವೆ. ಅಂತಹ ಮಣ್ಣಿನಲ್ಲಿ ಹುಟ್ಟಿ ಬಂದಿರುವ ಬಹುಪಾಲು ಫಸಲು ಬಂಡಾಯದ ಅಸಲಿ ಬೆಳೆಯೇ ಹೌದು.

ಅಷ್ಟಕ್ಕೂ ಬಂಡಾಯ ಸಾಹಿತ್ಯ ಸಂಘಟನೆಯು ಮೊದಲಿನಂತೆ ಎರಡೂ ದಡ ತುಂಬಿ ಭೋರ್ಗರೆದು ಹರಿಯುವ ಹೊಳೆಯಲ್ಲದಿರಬಹುದು. ಆದರೆ ಬಂಡಾಯದ ಹೊಳೆಯ ಅಂತರ್ಜಲ ಬತ್ತಿಲ್ಲ, ಬಾಡಿಲ್ಲ. ಅದು ಅಂತರ್ಗಾಮಿಯಾಗಿ, ಸುಪ್ತಗಾಮಿನಿಯಂತೆ ಎಲ್ಲ ಹೊಸಬರ ಎದೆಯ ದನಿಯಾಗಿ ಹರಿಯುತ್ತಿರುವುದನ್ನು ಖಂಡಿತಾ ಅಲ್ಲಗಳೆಯಲಾಗದು.


ಬಂಡಾಯದ ಲೇಬಲ್ ಇಲ್ಲದೆಯೇ ಬರೆಯುವ ಬಹುಪಾಲು ಹೊಸಬರ ಬರವಣಿಗೆಗೆ ಬಂಡಾಯದ ಗಾಢ ಪ್ರಭಾವ ಇರುವುದನ್ನು ನಾವು ಅನೇಕ ಸಂದರ್ಭಗಳಲ್ಲಿ ಗುರುತಿಸಬಹುದಾಗಿದೆ. ಅದಕ್ಕೆ ನಿದರ್ಶನ ಎಂಬಂತೆ ಹೇಳುವುದಾದರೆ, ಇವತ್ತಿನ ಬಹುತೇಕ ಕಥಾ ಸ್ಪರ್ಧೆಗಳ ಬಹುಮಾನಿತ ಕಥೆಗಳನ್ನು ಉದಾಹರಿಸಬಹುದಾಗಿದೆ. ಆ ಕತೆಗಳ ಜೀವದೊಡಲಲ್ಲಿ ಬಂಡಾಯದ ಬೀಜ ಬಳ್ಳಿಗಳೇ ಅಂಕುರಗೊಂಡಿರುವುದನ್ನು ಕಾಣಬಹುದು.

ಹೌದು ಅದಕ್ಕೆಂಬಂತೆ ನಾಲ್ಕು ದಶಕಗಳ ಹಿಂದೆಯೇ ಸಮೃದ್ಧ ಉಳುಮೆ ಮಾಡಿ ಬಂಡಾಯ ಸಾಹಿತ್ಯಭೂಮಿ ಹದಗೊಳಿಸಿದೆ. ಅದು ಬಯಲ ಬಿತ್ತನೆಗೆ ಹುಸಿಯೊಡೆಯದ ಹದವರಿತ ಹಸಿರು ಭೂಮಿ. ಅಂತೆಯೇ ನಿಜವಾದ ರಾಜಕೀಯ ಪ್ರಜ್ಞೆ, ನಿಶ್ಚಿತವಾದ ಮಾನವೀಯ ಗುಣಗಳು ಬಂಡಾಯದ ಹಸಿರು ನೆಲದಲ್ಲಿ ಹರಳುಗಟ್ಟಿವೆ. ಅದು ಇಂತಹ ಅನೇಕ ಸೂಕ್ಷ್ಮತೆಗಳಿಗೆ ಗಟ್ಟಿಮುಟ್ಟಾದ ಬುನಾದಿ ಕಟ್ಟಿ ಕೊಟ್ಟಿದೆ. ಅಂತಹ ಬುನಾದಿ ಮೇಲೆ ಅನೇಕ ಸೌಧಗಳನ್ನು ಕಟ್ಟ ಬಹುದಾಗಿದೆ. ಆದರೆ ಕೆಲವರಿಗೆ ಸೌಧಗಳಿಗೆ ಬದಲು ವಿಧಾನಸೌಧದ ಕನಸುಗಳು ಬೀಳ ತೊಡಗಿದ್ದು, ಈಡೇರಿದ್ದು ಸುಳ್ಳಲ್ಲ.

ಟಿವಿಯೊಂದಿಗೆ ಮಾತನಾಡುತ್ತಾ ದಾವಣಗೆರೆಯ ಕಿಡಿಗೇಡಿಯೊಬ್ಬ ವಿರೋಧ ಪಕ್ಷದ ಇಬ್ಬರು ನಾಯಕರನ್ನು ಗುಂಡಿಟ್ಟು ಕೊಲ್ಲಬೇಕೆಂದು ಬಹಿರಂಗವಾಗಿ ಕರೆಕೊಟ್ಟ. ಹೀಗಿರುವಾಗ ಬರಹಗಾರರಿಗೆ ಬರುವ ರಾಶಿ ರಾಶಿ ಬೆದರಿಕೆ ಪತ್ರಗಳದು ಯಾವ ಲೆಕ್ಕ ಅನ್ನುವಂತಾಗಿದೆ. ಹೀಗೆ ಉಸಿರು ಕಟ್ಟುವ ಹತ್ತು ಹಲವು ಬಿಕ್ಕಟ್ಟು, ಘೋರ ಕುತ್ತುಗಳ ನಡುವೆ ವರ್ತಮಾನದ ಭಾರತ ಬದುಕುತ್ತಲಿದೆ. ಇನ್ನೇನು ಎರಡು ಮೂರು ವರುಷ ಕಳೆಯುತ್ತಲೇ ಬಹುತ್ವ ಭಾರತದ ಹೆಸರನ್ನೇ ಬದಲಿಸಿ ಹಿಂದೂ ರಾಷ್ಟ್ರವನ್ನಾಗಿಸುವ ಒಳಹೇತುಗಳು. ಬಾಬಾ ಸಾಹೇಬರ ಸಂವಿಧಾನವನ್ನೇ ಬುಡಮೇಲುಗೊಳಿಸುವ ಹೀನಕೃತ್ಯಗಳು. ಅದಕ್ಕಾಗಿ ಹಲವು ಬಗೆಯ ಸಂಚಿತ ಹರಕೆಗಳು. ಹಂತ ಹಂತದ ಸಿದ್ಧತೆಗಳು. ಇದೇನು ರಹಸ್ಯದ ಕಾರ್ಯಾಚರಣೆಯಲ್ಲ. ಈಗೀಗ ನೇರವಾಗಿಯೇ ನೆರವೇರುವ ಬಹಿರಂಗ ಮಟ್ಟದ ಬದಲಾವಣೆಗಳು. ಅದಕ್ಕಾಗಿ ರಾಜಕೀಯ ಅಧಿಕಾರದ ಗಟ್ಟಿಮುಟ್ಟಾದ ಉಡದ ಹಿಡಿತಗಳು. ಏಕಮುಖೀಕರಣದತ್ತ ಚಲಿಸುತ್ತಿರುವ ಮತ್ತು ಅಪಾಯದ ಮಟ್ಟ ಮೀರುತ್ತಲಿರುವ ಬೆಳವಣಿಗೆಗಳು.

ಇಂತಹ ಭಯಂಕರ ಸವಾಲುಗಳಿಗೆ ಸಂಸ್ಕೃತಿ ಚಿಂತಕರು ಮುಖಾಮುಖಿ ಆಗುತ್ತಾರೆ. ಅದಕ್ಕೆಂತಲೇ ಸಂಸ್ಕೃತಿಯ ಧಾರೆಗಳಲ್ಲಿ ಧರ್ಮದ ಅಮಲು ಬಿತ್ತುವ, ಬಾಲ್ಯದಿಂದಲೇ ಮಕ್ಕಳಿಗೆ ಏಕಮುಖ ಧರ್ಮದ ವಿಷವುಣ್ಣಿಸುವ ನೇರ ಹುನ್ನಾರ. ಅದಕ್ಕೆ ಸಾಕ್ಷಿಯಾಗಿ ಕರ್ನಾಟಕದಲ್ಲಿ ಒಂದನೇ ತರಗತಿಯಿಂದ ಹತ್ತನೆಯ ತರಗತಿವರೆಗಿನ 'ಪು'ರೋಹಿತ ಮಾದರಿಯ ಪಠ್ಯಪುಸ್ತಕಗಳ ಮರು ಪರಿಷ್ಕರಣೆ. ವೈದಿಕ್ಯದ ಪೊಳ್ಳು ಇತಿಹಾಸ ಪೋಣಿಸುವ, ದತ್ತೂರಿ ಬೀಜಗಳ ಬಿತ್ತನೆ. ಮೊದಲಾಗಿದ್ದರೆ ಮಲವನ್ನು ತಲೆಯ ಮೇಲೆ ಹೊರಿಸುತ್ತಿದರು. ಈಗ ಹಾಗಲ್ಲ, ಅದನ್ನೀಗ ತಲೆಯೊಳಗೇ ತುರುಕುವ ಧಾರ್ಮಿಕ ಮೂಲಭೂತದ ಕೆಲಸ. ಬ್ರಾಹ್ಮಣ್ಯದ ಜುಟ್ಟಿನ ಕೈಗಳು ಭಾರತದ ಜುಟ್ಟು ಹಿಡಿದಿಡುವ ಹುನ್ನಾರ.

ಪ್ರಸ್ತುತ ಬಂಡಾಯ ಸಾಹಿತ್ಯ ಸಮ್ಮೇಳನ ಬಂಡಾಯೋತ್ತರ ಬದಲಾವಣೆಗೆ ಪಕ್ವವಾಗಿದೆ. ನಾನು ಮಾತಾಡಿಸಿದ ಈ ತಲೆಮಾರಿನ ಕೆಲವು ಯುವಕ, ಯುವತಿಯರ ಅನಿಸಿಕೆಯಂತೆ ಅದು ಅಪ್ಡೇಟ್ ಆಗುವ ಹಂಬಲ. ಸಮ್ಮೇಳನದಲ್ಲಿ ಬರಗೂರು ಅವರಂತಹ ಹಿರಿಯರೊಂದಿಗೆ ಸಂವಾದ ಏರ್ಪಡಿಸಬೇಕು. ಅಂತಹ ಅನೇಕ ಹಿರಿಯರೊಂದಿಗೆ ಮನಸು ಬಿಚ್ಚಿ ಮಾತಾಡುವ ಮೂಲಕ ಹಾದಿ ಹಸನು ಮತ್ತು ಹಗುರ ಮಾಡಿಕೊಳ್ಳುವ ಉಮೇದು ಅವರದು. ಆ ಮೂಲಕ ಬಂಡಾಯ ಸಾಹಿತ್ಯದ ತಾತ್ವಿಕತೆಗಳನ್ನು ಸಮಕಾಲೀನಗೊಳಿಸುವಂತಾಗ ಬೇಕಿದೆ. ಸಂಘಟನೆ ಜತೆ ಸೇರಿಕೊಂಡರೆ ಸೃಜನಶೀಲತೆಗೆ ಧಕ್ಕೆ ಬರುತ್ತದೆಂಬ ಕೆಲವು ಕವಿ'ರಾಜ'ಮಾರ್ಗಿ ಅವಕಾಶವಾದಿ ನಿಯೋ ಫ್ಯಾಸಿಸ್ಟ್ ಶಕ್ತಿಗಳನ್ನು ಹತ್ತಿಕ್ಕ ಬೇಕಿದೆ. ಆ ಮೂಲಕ ಘೋಷಣೆಯ ನುಡಿಗಟ್ಟು ಸಮೇತ ಸೇಫರ್ ಝೋನ್ ಚಿಂತಕರಿಂದ ಬಿಡುಗಡೆ ಆಗಬೇಕೆಂಬುದು ಹಲವು ಹೊಸಬರ ಅಂಬೋಣ..



- ಮಲ್ಲಿಕಾರ್ಜುನ ಕಡಕೋಳ,
9341010712

## ಸಿದ್ಧರಾಮೇಶ್ವರ ಶ್ರೀಗಳ 60ನೇ ವರ್ಷದ ವಜ್ರ ಮಹೋತ್ಸವ

(3ನೇ ಪುಟದಿಂದ) ಭಾರತದ ನಾಗರಿಕತೆಗೆ ಭೋವಿ ಸಮಾಜದ ಕೊಡುಗೆ ಅಪಾರವಾಗಿದೆ. ಅನಾದಿ ಕಾಲದಿಂದಲೂ ಭೋವಿ ಸಮಾಜದವರು ರಸ್ತೆ, ಕೆರೆ ನಿರ್ಮಾಣ, ಮಠ-ಮಂದಿರಗಳು, ಮಹಲ್‌ಗಳನ್ನು ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ವಚನ ಸಾಹಿತ್ಯದಲ್ಲಿ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಸ್ವಾಮೀಜಿ ಹಾಕಿಕೊಟ್ಟ ಕಾಯಕ ಯೋಗಿ ಪಥವನ್ನು ಶರಣರು ಧರ್ಮದ ಹಾದಿಯಲ್ಲಿ ಹಾಕಿಕೊಟ್ಟಿ ರುವುದು ದಿಕ್ಸೂಚಿಯಾಗಿದೆ. ಮಧ್ಯ ಕರ್ನಾಟಕದಲ್ಲಿ ಭೋವಿ ಸಮಾಜವನ್ನು ಜಾಗೃತಗೊಳಿಸಲು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸವಲತ್ತುಗಳನ್ನು ದೊರಕಿಸಲು ಈ ವಜ್ರ ಮಹೋತ್ಸವ ಕಾರ್ಯಕ್ರಮ ನಾಂದಿಯಾಗಲಿದೆ ಎಂದರು.

ಭೋವಿ ಅಭಿವೃದ್ಧಿ ನಿಗಮದ ನಿರ್ದೇಶಕ ಅಜ್ಜಯ್ಯ, ಭೋವಿ ಸಮಾಜದ ಜಿಲ್ಲಾಧ್ಯಕ್ಷ ಜಯಪ್ಪ, ಕಾರ್ಯಾಧ್ಯಕ್ಷ ಗೋಪಾಲಪ್ಪ, ಉಪಾಧ್ಯಕ್ಷ ಚಂದ್ರಪ್ಪ, ಜಗಳೂರು ತಾಲ್ಲೂಕು ಘಟಕದ ಅಧ್ಯಕ್ಷ ದೇವರಾಜ್, ಹೊನ್ನಾಳಿ ಘಟಕದ ಅಧ್ಯಕ್ಷ ನಾಗಪ್ಪ, ಜಿಜೆಸಿ ಕನ್ನಡ ಉಪನ್ಯಾಸಕ ಹೆಚ್.ಬಸವರಾಜ್, ಯುವ ಮುಖಂಡರಾದ ಬಸವರಾಜ್, ದಿನೇಶ್, ಕಾಂತರಾಜ್, ಮಂಜಪ್ಪ, ಮೂರ್ತೆಪ್ಪ, ಟಿ.ಶ್ರೀನಿವಾಸ್, ಎ.ಬಿ. ನಾಗರಾಜ್ ಹಾಗೂ ಇತರರಿದ್ದರು.

## ಸ್ಥಳೀಯರು-ಕನ್ನಡಿಗರಿಗೆ ಉದ್ಯೋಗ ಕಲ್ಪಿಸುವ ನೀತಿಗೆ ಸಂಪುಟ ಅಸ್ತು

(3ನೇ ಪುಟದಿಂದ) ಅಡಿಯಲ್ಲಿ 81 ಅರ್ಹ ನಿರ್ದಿಷ್ಟ ವರ್ಗದ ಶಿಕ್ಷಾ ಬಂಧಿಗಳನ್ನು ಮೊದಲನೇ ಹಂತದಲ್ಲಿ ಬಿಡುಗಡೆ ಮಾಡಲು ಅನುಮತಿ ನೀಡಲಾಗಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಕೆಲವು ಷರತ್ತುಗಳನ್ನು ವಿಧಿಸಿ, ಜೀವಾವಧಿ ಶಿಕ್ಷೆಗೆ ಒಳಪಟ್ಟವರು ಇದರ ಲಾಭ ಪಡೆದುಕೊಳ್ಳಲಿದ್ದಾರೆ. ಅವರ ಸನ್ನಡತೆಯ ಆಧಾರದ ಮೇಲೆ ಅವಧಿ ಪೂರ್ವ ಬಿಡುಗಡೆ ಇದಾಗಿರುತ್ತದೆ ಎಂದರು.


ಜಲಜೀವನ್ ಮಿಷನ್ ಯೋಜನೆಯಡಿ ಕೊಪ್ಪಳ, ಬೆಳಗಾವಿ, ಚಾಮರಾಜನಗರ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ಜನವಸತಿಗಳಲ್ಲಿ ಕುಡಿಯುವ ನೀರು ಕಲ್ಪಿಸುವ ವಿವಿಧ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ರಾಜ್ಯದ ಪದವಿ ಕಾಲೇಜುಗಳಲ್ಲಿ ಖಾಲಿ ಇರುವ 1142 ಡಿ ದರ್ಜೆಯ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಉನ್ನತ ಶಿಕ್ಷಣ ಇಲಾಖೆಗೆ ಅನುಮತಿ ನೀಡಲಾಗಿದೆ ಎಂದರು. ಶೈಕ್ಷಣಿಕ ಸಾಲಿಗೆ ವಿದ್ಯಾ ವಿಕಾಸ ಯೋಜನೆಯಡಿ ಸರ್ಕಾರಿ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಉಚಿತ ಶೂ ಮತ್ತು ಸಾಕ್ಸ್, ಅಥವಾ ಸ್ಯಾಂಡಲ್‌ಗಳ ವಿತರಣೆಗೆ ರೂ. 132.00 ಕೋಟಿ ಅನುದಾನದಲ್ಲಿ ವಿತರಿಸಲು ಆದೇಶ ಹೊರಡಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಲಾಗಿದೆ.

## ಅಮೃತ ಮಹೋತ್ಸವ ಚುನಾವಣಾ ದಿಕ್ಸೂಚಿ

(3ನೇ ಪುಟದಿಂದ) ಬರಲಿದೆ. ನನಗೂ ನಿಮ್ಮ ಸೇವೆ ಮಾಡುವ ಅವಕಾಶವನ್ನು ನೀಡಿ ಎಂದರು. ಬಿಜೆಪಿ ಸರ್ಕಾರ ಭ್ರಷ್ಟ ಆಡಳಿತವನ್ನು ನಡೆಸುತ್ತಿದೆ. ಮೋದಿಯವರ ಮರುಳು ಮಾತಿಗೆ ಮರುಳಾಗದೇ ಬಿಜೆಪಿಗೆ ಮತವನ್ನು ನೀಡದೆ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿ. ರಾಜ್ಯದಲ್ಲಿ ಹಾಲು, ಮೊಸರಿಗೆ ಜಿ. ಎಸ್.ಟಿ ವಿಧಿಸುವ ಲಜ್ಜೆಗೆಟ್ಟ ಸರ್ಕಾರವಿದ್ದರೆ ಅದು ಬಿಜೆಪಿ ಸರ್ಕಾರ ಮಾತ್ರ ಎಂದರು. ನಾಡಿನಲ್ಲಿ ಕೋಮು ಗಲಭೆಗಳನ್ನು ಬಿಜೆಪಿ ಸರ್ಕಾರ ಸೃಷ್ಟಿಸುತ್ತಿದೆ. ಅವರ ಆಡಳಿತದಿಂದ ಜನರು ರೋಸಿ ಹೋಗಿದ್ದಾರೆ. ಹಿಂದೂ, ಮುಸ್ಲಿಂ ಧರ್ಮದವರು ಪ್ರೀತಿ, ವಿಶ್ವಾಸದಿಂದ ಜೀವನ ನಡೆಸಬೇಕು. ಈ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಬೇಕು ಎಂದು ತಿಳಿಸಿದರು.

## ನಗರದಲ್ಲಿ ಇಂದು ಸಿದ್ಧ ಕಣ್ಣಿನ ಹನಿ



ವಿದ್ಯಾ ನಗರದ ಶ್ರೀ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಆವರಣದಲ್ಲಿ ಇಂದು ಬೆಳಿಗ್ಗೆ 10 ರಿಂದ 11 ರವರೆಗೆ ಉಚಿತವಾಗಿ ಸಿದ್ಧ ಕಣ್ಣಿನ ಹನಿ ಹಾಕುವ ಕಾರ್ಯಕ್ರಮ ನಡೆಯಲಿದೆ.

